ಸಂಪಾದಕರು :
ವಿಕಾಸ್ ಷಡಾಕ್ಷರಪ್ಪ ಮೆಳ್ಳೇಕಟ್ಟೆ

# ಜನತಾವಾಣಿ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ


ದಾವಣಗೆರೆ
ಶುಕ್ರವಾರ, ಏಪ್ರಿಲ್ 23, 2021

ಸಂಪುಟ : 47 ಸಂಚಿಕೆ : 353 ☎ 254736 91642 99999 RNI No: 27369/75, KA/SK/CTA-275/2021-2023. O/P @ J.D. Circle P.O. ಪುಟ : 4 ರೂ : 4.00 www.janathavani.com janathavani@mac.com

# ದಾವಣಗೆರೆ ಭಾಗಶಃ ಬಂದ್

## ಬೆಳಿಗ್ಗೆ ಶುಭಾರಂಭ, ಮಧ್ಯಾಹ್ನ ವಹಿವಾಟು ಸ್ಥಗಿತ, ಸ್ಪಷ್ಟನೆ ಇಲ್ಲದೆ ಕಂಗಾಲಾದ ವ್ಯಾಪಾರಿಗಳು-ನಾಗರಿಕರು: ಜಿಲ್ಲಾಡಳಿತ, ಪೊಲೀಸರ ವಿರುದ್ಧ ಅಸಮಾಧಾನ


ಬಿಕೋ ಎನ್ನುತ್ತಿರುವ ದಾವಣಗೆರೆಯ ಮಂಡಿಪೇಟೆ ರಸ್ತೆ


ಬಾಗಿಲು ಮುಚ್ಚಿರುವ ನಗರದೇವತೆ ಶ್ರೀ ದುರ್ಗಾಂಬಿಕಾ ದೇವಸ್ಥಾನ


ಅಂಗಡಿ ಬಂದ್ ಮಾಡಿಸುತ್ತಿರುವ ಪೊಲೀಸರು

ದಾವಣಗೆರೆ, ಏ.21- ನಗರದಲ್ಲಿ ನೈಟ್ ಕರ್ಫ್ಯೂ ಮುಗಿಸಿ ಗುರುವಾರ ಮುಂಜಾನೆ ವ್ಯಾಪಾರ-ವಹಿವಾಟು ಶುಭಾರಂಭ ಮಾಡಿದ ವ್ಯಾಪಾರಿಗಳು ಮಧ್ಯಾಹ್ನವಾಗುತ್ತಲೇ ಪೊಲೀಸರು ಅಂಗಡಿಗಳನ್ನು ಬಂದ್ ಮಾಡಿ ಎನ್ನುತ್ತಿದ್ದ ಘೋಷಣೆಗೆ ದಂಗಾದರು.

ಬಟ್ಟೆ ಅಂಗಡಿ, ಚಿನ್ನಾಭರಣದ ಮಳಿಗೆಗಳು, ಜೆರಾಕ್ಸ್, ಎಲೆಕ್ಟ್ರಿಕಲ್ ಹಾಗೂ ಎಲೆಕ್ಟ್ರಾನಿಕ್ ಶಾಪ್, ಪುಸ್ತಕದ ಅಂಗಡಿ, ಕನ್ನಡಕದ ಅಂಗಡಿ, ಮೊಬೈಲ್ ಅಂಗಡಿಗಳು ಸೇರಿದಂತೆ ಎಲ್ಲಾ ಮಳಿಗೆಗಳು ಶೆಟರ್ ಎಳೆಯಲಾರಂಭಿಸಿದರು. ಪೊಲೀಸರ ಸೂಚನೆ ಮೀರಿಯೂ ವಹಿವಾಟು ನಡೆಸುತ್ತಿದ್ದ ವ್ಯಾಪಾರಿಗಳಿಗೆ ಪೊಲೀಸರು ಎಚ್ಚರಿಕೆ ನೀಡಿ ಬಂದ್ ಮಾಡಿಸಿದರು. ಪರಿಣಾಮ ಮಧ್ಯಾಹ್ನದ ವೇಳೆಗೆ ನಗರ ಭಾಗಶಃ ಬಂದ್ ಆಗಿತ್ತು.

ಯಾವ ಅಂಗಡಿ ತೆರೆಯಬೇಕು? ಯಾವ ವ್ಯಾಪಾರಕ್ಕೆ ಸರ್ಕಾರ ಅನುಮತಿ ನೀಡಿದೆ? ಎಂಬ ಸ್ಪಷ್ಟ ಚಿತ್ರಣ ಸಿಗದೆ ವ್ಯಾಪಾರಿಗಳು ಅಕ್ಷರಷಃ ಕಂಗಾಲಾಗಿದ್ದರು. ಅಕ್ಕ-ಪಕ್ಕದ ಅಂಗಡಿಗಳ ಮಾಲೀಕರು ಪರಸ್ಪರ ಮಾತನಾಡಿಕೊಳ್ಳುತ್ತಿದ್ದರು. ಜಿಲ್ಲಾಡಳಿತ ಹಾಗೂ ಪೊಲೀಸ್ ಇಲಾಖೆ ಸ್ಪಷ್ಟವಾಗಿ ತಿಳಿಸದೇ ಇದ್ದದ್ದಕ್ಕೆ ತೀವ್ರ ಬೇಸರ ವ್ಯಕ್ತಪಡಿಸುತ್ತಿದ್ದುದು ಕಂಡು ಬಂತು. ಡಿಪೇಟೆಯಲ್ಲಿ ಶೇ.75ರಷ್ಟು ಮಳಿಗೆಗಳು ಬಾಗಿಲು ಮುಚ್ಚಿದ್ದವು. ಜನಸಂಖ್ಯೆಯೂ ವಿರಳವಾಗಿತ್ತು.

ಮಧ್ಯಾಹ್ನದ ನಂತರ ಸಾಮಾಜಿಕ ಜಾಲ ತಾಣಗಳಲ್ಲಿ ಸರ್ಕಾರದ ನೂತನ ಮಾರ್ಗಸೂಚಿಗಳನ್ನು ನೋಡಿ ವ್ಯಾಪಾರಕ್ಕೆ ಅವಕಾಶವಿದ್ದವರು ಬಾಗಿಲು ತೆರೆದು ವ್ಯಾಪಾರ ಆರಂಭಿಸಿದರು. ಕೆಲ ಅಂಗಡಿ ಮಾಲೀಕರು ಪೊಲೀಸರು ಮತ್ತೆ ಬಂದರೆ ನೋಡೋಣ ಎಂದು ವಹಿವಾಟು ನಡೆಸಲಾರಂಭಿಸಿದರು. ಸಂಜೆ ಕೆಲವೆಡೆ ಪೊಲೀಸರೇ ನಿಮ್ಮ ಅಂಗಡಿಗಳನ್ನು ತೆರೆಯಬಹುದೆಂದು ಸೂಚಿಸುತ್ತಿದ್ದುದು ಕಂಡು ಬಂತು.

ಸಂಜೆ ವೇಳೆಗೆ ಮೊಬೈಲ್ ಅಂಗಡಿಗಳು, ಎಲೆಕ್ಟ್ರಾನಿಕ್, ಎಲೆಕ್ಟ್ರಿಕಲ್ ಅಂಗಡಿಗಳು, ಹಾರ್ಡ್‌ವೇರ್ ಅಂಗಡಿಗಳು, ತಾಡಪಾಲು, ಮೋಟಾರ್ ಮತ್ತಿತರೆ ಕೃಷಿಗೆ ಸಂಬಂಧಿಸಿದ ಅಂಗಡಿಗಳ ಮಳಿಗೆಗಳು ತೆರೆದಿದ್ದವು.

**ಬಸ್-ಆಟೋ ಚಾಲಕರಿಗೆ ತಹಶೀಲ್ದಾರ್ ತರಾಟೆ:** ಸರ್ಕಾರದ ಮಾರ್ಗಸೂಚಿಗಳನ್ನು ಪಾಲಿಸದೆ ಬೇತೂರು ರಸ್ತೆಯಲ್ಲಿ ಹೆಚ್ಚು ಪ್ರಯಾಣಿಕರನ್ನು ಹೊತ್ತೊಯ್ಯುತ್ತಿದ್ದ ಬಸ್ ತಡೆದು ಚಾಲಕ ನಿರ್ವಾಹಕರನ್ನು ತಹಶೀಲ್ದಾರ್ ಗಿರೀಶ್ ತರಾಟೆಗೆ ತೆಗೆದುಕೊಂಡರು. ಆಟೋದಲ್ಲೂ ಸಹ ಐದಾರು ಜನರನ್ನು ಕೊಂಡು ಹೋಗುತ್ತಿದ್ದವರನ್ನು ಗಮನಿಸಿ, ಪ್ರಯಾಣಿಕರನ್ನು ಇಳಿಸಿ ದಂಡ ವಿಧಿಸಿ ಜಾಗೃತಿ ಮೂಡಿಸಿದರು.

ಬೆಳಿಗ್ಗೆ ತೆರೆದಿದ್ದ ಬಿ.ಎಸ್. ಚನ್ನಬಸಪ್ಪ ಅಂಡ್ ಸನ್ಸ್ ಬಟ್ಟೆ ಅಂಗಡಿಯನ್ನೂ ಪೊಲೀಸರು ಬಂದ್ ಮಾಡಿಸಿದರು. ಬೆಳಗ್ಗೆ ಡೆಂಟಲ್ ಕಾಲೇಜ್ ರಸ್ತೆಯಲ್ಲಿದ್ದ ಬಿಎಸ್‌ಸಿ ಮಳಿಗೆಗೆ ಎಸ್ಪಿ ಹನುಮಂತರಾಯ ಆಗಮಿಸಿ ಬಂದ್ ಮಾಡುವಂತೆ ಸೂಚಿಸಿದರು.


ಅಂಗಡಿಗಳು ಮುಚ್ಚಿದ್ದರಿಂದ ಖರೀದಿಗಾಗಿ ಬಂದವರು ಕಾದು ಕುಳಿತರು


ಹಣ್ಣು, ತರಕಾರಿ ವ್ಯಾಪಾರ ನಿರಾತಂಕವಾಗಿ ನಡೆಯಿತು

# ಕಟ್ಟಡ, ಕೃಷಿ, ಕೈಗಾರಿಕೆಗಳಿಗೆ ವಾರದ ನಿರ್ಬಂಧವಿಲ್ಲ: ಡಿಸಿ

ದಾವಣಗೆರೆ, ಏ. 22 - ರಾಜ್ಯ ಸರ್ಕಾರ ಜಾರಿಗೆ ತಂದಿರುವ ನಿರ್ಬಂಧಗಳ ಮಾರ್ಗಸೂಚಿ ಅನ್ವಯ ವಾರದ ದಿನಗಳಾದ ಸೋಮವಾರದಿಂದ ಶುಕ್ರವಾರದವರೆಗೆ ಕಟ್ಟಡ ನಿರ್ಮಾಣ, ಕೃಷಿ ಹಾಗೂ ಕೈಗಾರಿಕೆ ಸೇರಿದಂತೆ ಕೆಲ ಚಟುವಟಿಕೆಗಳಿಗೆ ಅನುಮತಿ ಇದೆ ಎಂದು ಜಿಲ್ಲಾಧಿಕಾರಿ ಮಹಾಂತೇಶ್ ಬೀಳಗಿ ತಿಳಿಸಿದ್ದಾರೆ.

**ಮೊಬೈಲ್ ಅಂಗಡಿಗಳಿಗೆ ಅನುಮತಿ**

**ರಾತ್ರಿ 11ರವರೆಗೆ ಆಹಾರ ಪೂರೈಕೆ**



ಮೇ 4ರವರೆಗೆ ಜಾರಿಯಲ್ಲಿರುವ ವಾರದ ದಿನಗಳ ನಿರ್ಬಂಧ ಮಾರ್ಗಸೂಚಿಗಳ ಕುರಿತು ಪತ್ರಿಕಾಗೋಷ್ಠಿಯಲ್ಲಿ ವಿವರಣೆ ನೀಡಿರುವ ಅವರು, ಕಟ್ಟಡ ಕಾಮಗಾರಿಗಳಿಗೆ ಅನುಮತಿ ಇದೆ. ಕಟ್ಟಡ ಕಾಮಗಾರಿಗಳಿಗೆ ಅಗತ್ಯವಾದ ಕಬ್ಬಿಣ, ಸಿಮೆಂಟ್, ಗಾಜು, ಮರ, ಪೇಂಟ್ ಇತ್ಯಾದಿ ಅಂಗಡಿಗಳು ಹಾಗೂ ಸಾಮಿಲ್‌ಗಳಂತಹ ಘಟಕಗಳು ಕಾರ್ಯ ನಿರ್ವಹಿಸಬಹುದು ಎಂದರು.

ಅದೇ ರೀತಿ ಕೃಷಿ ಹಾಗೂ ಅದಕ್ಕೆ ಸಂಬಂಧಿತ ಎಲ್ಲ ಚಟುವಟಿಕೆಗಳಿಗೆ ಕಂಟೈನ್‌ಮೆಂಟ್ ವಲಯದ ಹೊರಗೆ ಅನುಮತಿ ಇದೆ. ಎಲ್ಲಾ ಕೈಗಾರಿಕಾ ಘಟಕಗಳು ಹಾಗೂ ಉತ್ಪಾದನಾ ಘಟಕಗಳು ಕಾರ್ಯ ನಿರ್ವಹಿಸಬಹುದು ಎಂದು ಹೇಳಿದರು.

ವಾರದ ದಿನಗಳಲ್ಲಿ ದಿನಸಿ ಅಂಗಡಿಗಳು, ಪಡಿತರ ಅಂಗಡಿಗಳು, ಆಹಾರ ಸಂಸ್ಕರಣಾ ಘಟಕಗಳು, ಹಣ್ಣು - ತರಕಾರಿ, ಹಾಲು, ಮಾಂಸ, ಮೀನು ಹಾಗೂ ಮೇವಿನ ಪೂರೈಕೆಗೆ ಅನುಮತಿ ಇದೆ. ಸಗಟು ತರಕಾರಿ, ಹಣ್ಣು, ಹೂವುಗಳ ಮಾರಾಟಕ್ಕೂ ಅನುಮತಿ ಇದೆ.

ಹೋಟೆಲ್ ಹಾಗೂ ರೆಸ್ಟೋರೆಂಟ್‌ಗಳು ರಾತ್ರಿ 9 ಗಂಟೆಯವರೆಗೆ ಪಾರ್ಸಲ್ ಸೇವೆ ನೀಡಬಹುದು. ರಾತ್ರಿ 9 ಗಂಟೆಯ ಒಳಗೆ ಆಹಾರ ಪಡೆಯುವ ಸ್ವಿಗ್ಗಿ - ಜೊಮ್ಯಾಟೋ ಮುಂತಾದ ಆಹಾರ ಪೂರೈಕೆ ಸಂಸ್ಥೆಗಳು ರಾತ್ರಿ 11ರವರೆಗೆ ಕಾರ್ಯ ನಿರ್ವಹಿಸಬಹುದು ಎಂದು ಜಿಲ್ಲಾಧಿಕಾರಿ ಹೇಳಿದ್ದಾರೆ.

ಇಂಟರ್‌ನೆಟ್ ಸೇವೆಗೆ ಅನುಮತಿ ನೀಡಲಾಗಿದೆ. ಈ ಹಿನ್ನೆಲೆಯಲ್ಲಿ ಮೊಬೈಲ್ ಅಂಗಡಿಗಳನ್ನು ತೆರೆಯಲೂ (2ನೇ ಪುಟಕ್ಕೆ)

### ಜಿಲ್ಲಾಡಳಿತದಿಂದ ಗುರುತಿನ ಚೀಟಿ ಇಲ್ಲ

**ರಾಜ್ಯ ಸರ್ಕಾರ ಪ್ರಕಟಿಸಿರುವ ಮಾರ್ಗಸೂಚಿ ಪ್ರಕಾರ, ಸಾರ್ವಜನಿಕರು ಸಂಚಾರಕ್ಕಾಗಿ ಜಿಲ್ಲಾಡಳಿತದಿಂದ ಪ್ರತ್ಯೇಕ ಗುರುತಿನ ಚೀಟಿ ಪಡೆಯುವ ಅಗತ್ಯವಿಲ್ಲ ಎಂದು ಜಿಲ್ಲಾಧಿಕಾರಿ ಮಹಾಂತೇಶ್ ಬೀಳಗಿ ಸ್ಪಷ್ಟಪಡಿಸಿದ್ದಾರೆ. ವಾರದ ದಿನಗಳಲ್ಲಿ ಚಟುವಟಿಕೆಗಳಿಗೆ ಅವಕಾಶ ಪಡೆದಿರುವ ಕೈಗಾರಿಕೆಗಳು ಮತ್ತಿತರೆ ಸಂಸ್ಥೆಗಳು ನೀಡಿರುವ ಗುರುತಿನ ಚೀಟಿಯೊಂದೇ ಸಾಕು ಎಂದವರು ಹೇಳಿದ್ದಾರೆ.**

### ವಾರಾಂತ್ಯದ ಕರ್ಫ್ಯೂನಲ್ಲಿ ಮದ್ಯ ಮಾರಾಟ ಇಲ್ಲ

**ದಾವಣಗೆರೆ, ಏ. 22 - ರಾಜ್ಯ ಸರ್ಕಾರ ಜಾರಿಗೆ ತಂದಿರುವ ನಿರ್ಬಂಧ ಮಾರ್ಗಸೂಚಿ ಅನ್ವಯ ವಾರಾಂತ್ಯದ ಕರ್ಫ್ಯೂ ಅವಧಿಯಲ್ಲಿ ಮದ್ಯದ ಅಂಗಡಿಗಳು ಬಂದ್ ಆಗಿರಲಿವೆ. ವಾರದ ದಿನಗಳಾದ ಸೋಮವಾರದಿಂದ ಶುಕ್ರವಾರದವರೆಗೆ ರಾತ್ರಿ 9 ಗಂಟೆಯವರೆಗೆ ಮದ್ಯದಂಗಡಿಗಳು ಪಾರ್ಸಲ್ ರೂಪದಲ್ಲಿ ಮಾತ್ರ ಮದ್ಯ ಮಾರಾಟ ಮಾಡಲು ಅವಕಾಶ ಕಲ್ಪಿಸಲಾಗಿದೆ.**

# ಕರ್ಫ್ಯೂ ಉಲ್ಲಂಘಿಸಿದರೆ ಕಠಿಣ ಕ್ರಮ

## ವಾರಾಂತ್ಯದ ಕರ್ಫ್ಯೂ ಲಾಕ್‌ಡೌನ್ ಮಾದರಿ: ಬೊಮ್ಮಾಯಿ

ಬೆಂಗಳೂರು, ಏ. 22 - ವಾರಾಂತ್ಯದ ಕರ್ಫ್ಯೂ ಲಾಕ್‌ಡೌನ್ ಮಾದರಿಯಲ್ಲೇ ಕಟ್ಟುನಿಟ್ಟಾಗಿರಲಿದೆ. ಹೊರ ಜಿಲ್ಲೆಗಳ ಪ್ರಮುಖ ರಸ್ತೆಗಳು ಬಂದಾಗಿರುತ್ತವೆ ಎಂದು ಗೃಹ ಸಚಿವ ಬಸವರಾಜ್ ಬೊಮ್ಮಾಯಿ ತಿಳಿಸಿದ್ದಾರೆ.

ಪತ್ರಕರ್ತರೊಂದಿಗೆ ಮಾತನಾಡುತ್ತಿದ್ದ ಅವರು, ವಾರಾಂತ್ಯದ ಕರ್ಫ್ಯೂ ಉಲ್ಲಂಘಿಸಿದರೆ ಅಂತಹವರ ಮೇಲೆ ಕಠಿಣ ಕ್ರಮ ಕೈಗೊಳ್ಳಲಾಗುವುದು ಎಂದಿದ್ದಾರೆ.

ರಾಜ್ಯಾದ್ಯಂತ ಸೋಂಕು ಹೆಚ್ಚಾಗುತ್ತಿರುವ ಹಿನ್ನೆಲೆಯಲ್ಲಿ ಖಾಸಗಿ ಆಸ್ಪತ್ರೆಗಳಲ್ಲಿ ಶೇ. 50 ರಿಂದ 80 ರಷ್ಟು ಹಾಸಿಗೆಗಳನ್ನು ಕೋವಿಡ್-19 ಸೋಂಕಿತರಿಗೆ ಮೀಸಲಿರಿಸಲು ಕ್ರಮ ಕೈಗೊಳ್ಳಲಾಗುತ್ತಿದೆ ಎಂದು ಹೇಳಿದರು.

ಮೈಸೂರು ಜಿಲ್ಲಾ ಪ್ರವಾಸಕ್ಕೆ ತೆರಳುವುದಕ್ಕೂ ಮುನ್ನ ಸುದ್ದಿಗಾರರೊಂದಿಗೆ ಮಾತನಾಡಿದ ಆರೋಗ್ಯ ಸಚಿವ ಡಾ. ಸುಧಾಕರ್, ಸೋಂಕು ಉಲ್ಬಣಗೊಳ್ಳುತ್ತಿರುವ ಹಿನ್ನೆಲೆಯಲ್ಲಿ ತುರ್ತು ಆರೋಗ್ಯ ಸೇವೆ ಎಂದು ಪರಿಗಣಿಸಲು ಸರ್ಕಾರ ನಿರ್ಧರಿಸಿದೆ. ಈ ಸಂಬಂಧ ಮುಖ್ಯಮಂತ್ರಿಯವರು ಕೆಲವು ಕಠಿಣ ತೀರ್ಮಾನಗಳನ್ನು ಕೈಗೊಳ್ಳಲಿದ್ದಾರೆ ಎಂದರು.

ಈ ನಡುವೆ, ಸೋಂಕು ಸಂದರ್ಭದಲ್ಲಿ ಕಾಂಗ್ರೆಸ್ ಸಾರ್ವಜನಿಕರನ್ನು ತಪ್ಪು ದಾರಿಗೆ ಎಳೆಯುತ್ತಿದೆ ಎಂದು ಬಿಜೆಪಿ ಕಿಡಿಕಾರಿದೆ.

ದೇಶದಲ್ಲಿ ವೈದ್ಯಕೀಯ ಮೂಲಸೌಕರ್ಯ ಕ್ಷೇತ್ರಕ್ಕೆ ಕಾಂಗ್ರೆಸ್ ಕೊಡುಗೆ ಶೂನ್ಯ ಎಂದು ಸರಣಿ ಟ್ವೀಟ್ ಮಾಡಿರುವ ಬಿಜೆಪಿ, ಕೊರೊನಾ ಸಾಂಕ್ರಾಮಿಕ ರೋಗವನ್ನು ಕಾಂಗ್ರೆಸ್ ರಾಜಕೀಯವಾಗಿ ಬಳಸಿಕೊಳ್ಳುತ್ತಿದೆ ಎಂದು ಟೀಕಿಸಿದೆ.

## ರಾಜ್ಯದಲ್ಲಿ 25,795 ಸೋಂಕಿತರು ಪತ್ತೆ

ಬೆಂಗಳೂರು, ಏ. 22 -ರಾಜ್ಯದಲ್ಲಿ ಗುರುವಾರ ಒಂದೇ ದಿನ 25,795 ಕೊರೊನಾ ಸೋಂಕಿತರು ಕಂಡುಬಂದಿದ್ದು, ಇದೇ ದಿನ 123 ಜನ ಸಾವನ್ನಪ್ಪಿದ್ದಾರೆ. ಬೆಂಗಳೂರು ನಗರ ಒಂದರಲ್ಲೇ 15,244 ಸೋಂಕಿತರು ಕಂಡು ಬಂದಿದ್ದಾರೆ. ಇದೇ ದಿನದಂದು 5,624 ರೋಗಿಗಳು ಗುಣಮುಖರಾಗಿ (2ನೇ ಪುಟಕ್ಕೆ)

MANIS DATA LINK

# 446/1, Lawyer Road, K.B.Extension, Davanagere.

ನಿಮ್ಮಲ್ಲಿರುವ ಹಳೇ ಲ್ಯಾಂಡ್ ಲೈನ್ ನಂಬರ್‌ಗೆ ಇಂಟರ್‌ನೆಟ್ (FTTH) ಸೌಲಭ್ಯ ಕಲ್ಪಿಸಲಾಗುವುದು

3300 GB
60 Mbps
Super Speed Inter Net
24 Hrs. Unlimited free Calling on (Local + STD) to Any Network, FTTH Plan
Starting Plan
Rs.599/-
Instalation Free
PH: 08192 295900

## ರೆಮಿಡಿಸಿವಿರ್ ಅಕ್ರಮ: ಜಿಲ್ಲಾಸ್ಪತ್ರೆ ನೌಕರರ ಬಂಧನ

ದಾವಣಗೆರೆ, ಏ.22- ಕೊರೋನಾ ಸೋಂಕಿತರಿಗೆ ನೀಡುವ ದುಬಾರಿ ಬೆಲೆಯ ರೆಮ್ ಡಿಸಿವಿರ್ ಚುಚ್ಚುಮದ್ದುಗಳನ್ನು ಅಕ್ರಮವಾಗಿ ಮಾರಾಟ ಮಾಡುತ್ತಿದ್ದ ಸಿಜಿ ಆಸ್ಪತ್ರೆಯ ಫಾರ್ಮಾಸಿಸ್ಟ್ ಹಾಗೂ ಸಾಥ್ ನೀಡಿದ್ದ ದಿನಗೂಲಿ ಕೆಲಸಗಾರ ಇಬ್ಬರೂ ಇದೀಗ ಪೊಲೀಸರ ಅತಿಥಿಯಾಗಿದ್ದಾರೆ.

ಆಸ್ಪತ್ರೆಯ ಫಾರ್ಮಾಸಿಸ್ಟ್ ಮಂಜುನಾಥ ಮತ್ತು ದಿನಗೂಲಿ ಕೆಲಸಗಾರ ಗಣೇಶಪ್ಪ ಬಂಧಿತರು.


ನಗರದ ಸಿಜಿ ಆಸ್ಪತ್ರೆಯಲ್ಲಿ ದಿನಗೂಲಿ ಕೆಲಸ ಮಾಡುವ ಗಣೇಶಪ್ಪ ಎಂಬಾತ ಕೋವಿಡ್ ಇಂಜೆಕ್ಷನ್ ಆದ ರೆಮ್ ಡಿಸಿವಿರ್ ಔಷಧಿಗಳನ್ನು ಸಾರ್ವಜನಿಕರಿಗೆ ಅಕ್ರಮವಾಗಿ ಮಾರಾಟ ಮಾಡುತ್ತಿರುವ ಬಗ್ಗೆ ಖಚಿತ ಮಾಹಿತಿ ಮೇರೆಗೆ ಕೂಡಲೇ ಕಾರ್ಯಪ್ರವೃತ್ತರಾದ ಆಸ್ಪತ್ರೆಯ ಔಷಧಿ ಪರಿವೀಕ್ಷಕಿ ಎಂ.ಎಸ್. ಗೀತಾ ಅವರು, ಬಡಾವಣೆ ಪೊಲೀಸ್ ಠಾಣೆಯ ಪೊಲೀಸ್ ನಿರೀಕ್ಷಕ ಅರವಿಂದ್ ಅವರಿಗೆ ಕರೆ ಮಾಡಿ (2ನೇ ಪುಟಕ್ಕೆ)

## ಕೊರೊನಾ ಎದುರಿಸಲು ದಾವಣಗೆರೆಗೆ 10 ಕೋಟಿ ರೂ.

ಬೆಂಗಳೂರು, ಏ. 22 – ಕೊರೊನಾ ಪರಿಸ್ಥಿತಿ ಎದುರಿಸಲು ಹಲವಾರು ಜಿಲ್ಲೆಗಳಿಗೆ 571 ಕೋಟಿ ರೂ. ಬಿಡುಗಡೆ ಮಾಡಿರುವುದಾಗಿ ಕಂದಾಯ ಸಚಿವ ಆರ್. ಅಶೋಕ್ ತಿಳಿಸಿದ್ದಾರೆ. ಬೆಂಗಳೂರು ನಗರ ಪಾಲಿಕೆಗೆ 305 ಕೋಟಿ ರೂ.ಗಳನ್ನು ಬಿಡುಗಡೆ ಮಾಡಿದೆ. ಇದನ್ನು ಔಷಧಿ, ಚಿಕಿತ್ಸೆ, ಪರೀಕ್ಷೆ ಇತ್ಯಾದಿಗಳಿಗೆ ಬಳಸಲಾಗುವುದು ಎಂದು ಪತ್ರಕರ್ತರೊಂದಿಗೆ ಮಾತನಾಡುತ್ತಿದ್ದ ಸಚಿವರು ಹೇಳಿದ್ದಾರೆ.

ಕಂದಾಯ ಇಲಾಖೆಯ ವಿಕೋಪ ನಿರ್ವಹಣಾ ನಿಧಿಯಡಿ ಹಣ ಬಿಡುಗಡೆ ಮಾಡಲಾಗಿದೆ. ಬೆಂಗಳೂರು ಹೊರತು ಪಡಿಸಿ ಇತರೆ ಜಿಲ್ಲೆಗಳಿಗೆ 266 ಕೋಟಿ ರೂ. ಬಿಡುಗಡೆ ಮಾಡಲಾಗಿದೆ. ಕಲಬುರಗಿಗೆ 50 ಕೋಟಿ ರೂ. ನೀಡಲಾಗಿದೆ. ಬೆಂಗಳೂರು ನಗರ ಹಾಗೂ ಬೆಂಗಳೂರು ಗ್ರಾಮಾಂತರ ಜಿಲ್ಲೆಗಳಿಗೆ ತಲಾ 15 ಕೋಟಿ ರೂ., ದಾವಣಗೆರೆ, ಚಾಮರಾಜನಗರ, ಶಿವಮೊಗ್ಗ ಹಾಗೂ ತುಮಕೂರು ಸೇರಿದಂತೆ ಹಲವು ಜಿಲ್ಲೆಗಳಿಗೆ ತಲಾ 10 ಕೋಟಿ ರೂ. ಬಿಡುಗಡೆ ಮಾಡಲಾಗಿದೆ ಎಂದವರು ಹೇಳಿದ್ದಾರೆ

## ನೀರಾವರಿ ಯೋಜನೆಗಳ ಭೂ ಸ್ವಾಧೀನ ಪ್ರಕ್ರಿಯೆ ತ್ವರಿತಗೊಳಿಸಿ : ಸಂಸದ ಸಿದ್ದೇಶ್ವರ



ದಾವಣಗೆರೆ, ಏ. 22- ಜಿಲ್ಲೆಯ ಸಾಸ್ವೆಹಳ್ಳಿ ಏತ ನೀರಾವರಿ ಯೋಜನೆಗೆ ಸಂಬಂಧಿಸಿದಂತೆ ಪಂಪ್‌ಹೌಸ್‌ಗಳು, ಡೆಲಿವರಿ ಚೇಂಬರ್‌ಗಳು, ಎಲೆಕ್ಟ್ರಿಕಲ್ ಸಬ್‌ಸ್ಟೇಷನ್‌ಗಳಿಗೆ ವಿದ್ಯುತ್ ಸಂಪರ್ಕಕ್ಕಾಗಿ ನಿರ್ಮಿಸಬೇಕಿರುವ ವಿದ್ಯುತ್ ಟವರ್‌ಗಳ ನಿರ್ಮಾಣಕ್ಕೆ ಅಗತ್ಯವಿರುವ ಎಲ್ಲ ಭೂಸ್ವಾಧೀನ ಪ್ರಕ್ರಿಯೆಗಳನ್ನು ತ್ವರಿತವಾಗಿ ಪೂರ್ಣಗೊಳಿಸುವಂತೆ ಸಂಸದ ಜಿ.ಎಂ. ಸಿದ್ದೇಶ್ವರ ಅಧಿಕಾರಿಗಳಿಗೆ ಸೂಚಿಸಿದರು.

ಸಾಸ್ವೆಹಳ್ಳಿ ಸೇರಿದಂತೆ ವಿವಿಧ ಏತ ನೀರಾವರಿ ಯೋಜನೆಗಳ ಕುರಿತು ಜಿಲ್ಲಾ ಪಂಚಾಯತ್ ಸಭಾಂಗಣದಲ್ಲಿ ಗುರುವಾರ ಏರ್ಪಡಿಸಲಾದ ಪ್ರಗತಿ ಪರಿಶೀಲನಾ ಸಭೆಯಲ್ಲಿ ಭಾಗವಹಿಸಿ ಅವರು ಮಾತನಾಡಿ, (2ನೇ ಪುಟಕ್ಕೆ)

ಆರತಕ್ಷತೆ ಮುಂದೂಡಿಕೆ

ಆತ್ಮೀಯ ಬಂಧು-ಮಿತ್ರರ ಗಮನಕ್ಕೆ

ಕೊರೊನಾ ಉಲ್ಬಣಿಸುತ್ತಿರುವುದರಿಂದ, ಕರ್ನಾಟಕ ಸರ್ಕಾರ ಮದುವೆ ಸಮಾರಂಭ ನಡೆಸಲು ಮಾರ್ಗ ಸೂಚಿ ನೀಡಿದೆ. ಮದುವೆಗಳಲ್ಲಿ ಭಾಗವಹಿಸಲು 50 ಜನರಿಗೆ ಮಾತ್ರವೇ ಅವಕಾಶ ನೀಡಿದೆಯಾದ್ದರಿಂದ, ದಿನಾಂಕ : 24.04.2021ನೇ ಶನಿವಾರದ ಆರತಕ್ಷತೆ ಕಾರ್ಯಕ್ರಮವನ್ನು ಮುಂದೂಡಲಾಗಿದೆ. ಆದ್ದರಿಂದ ನೂತನ ವಧು-ವರರಿಗೆ ತಾವುಗಳು ಇದ್ದಲ್ಲಿಯೇ ಶುಭ ಹಾರೈಸಬೇಕಾಗಿ ಪ್ರಾರ್ಥನೆ. ತೊಂದರೆಯುಂಟಾಗಿರುವುದಕ್ಕೆ, ವಿಷಾದಿಸುತ್ತೇವೆ. ಕೋವಿಡ್-19 ಭಯ ಬೇಡ, ಆರೋಗ್ಯದ ಬಗ್ಗೆ ಎಚ್ಚರವಿರಲಿ.

ತಮ್ಮ ವಿಶ್ವಾಸಿಗಳು

ಶ್ರೀಮತಿ ಶಶಿಕಲಾ ಮತ್ತು ಡಿ. ನಾಗರಾಜ್ ಮೂರ್ತಿ
ಮ್ಯಾನೇಜಿಂಗ್ ಡೈರೆಕ್ಟರ್
ಮನಿಪ್ಲಾಂಟ್ ಮಲ್ಟಿಪರ್ಪಸ್ ಸೌಹಾರ್ದ ಕೋ-ಆಪ್ ನಿಯಮಿತ, ದಾವಣಗೆರೆ.
ಮೊ. : 98802 89991, 96868 63858

## 1,500 ಮೆಟ್ರಿಕ್ ಟನ್ ಆಕ್ಸಿಜನ್‌ಗಾಗಿ ಕೇಂದ್ರಕ್ಕೆ ರಾಜ್ಯದಿಂದ ಬೇಡಿಕೆ

ಬೆಂಗಳೂರು, ಏ. 22 – ರಾಜ್ಯದಲ್ಲಿ ಕೊರೊನಾ ಪ್ರಕರಣಗಳು ಹೆಚ್ಚಾಗುತ್ತಿರುವ ಹಿನ್ನೆಲೆಯಲ್ಲಿ ಕೇಂದ್ರ ಸರ್ಕಾರ 1,500 ಮೆಟ್ರಿಕ್ ಟನ್ ಆಕ್ಸಿಜನ್ ಪೂರೈಕೆ ಮಾಡಬೇಕು ಹಾಗೂ ಲಕ್ಷ ವಯಾಲ್ (2ನೇ ಪುಟಕ್ಕೆ)

ಪುಣ್ಯಸ್ಮರಣೆ





ಶ್ರೀಮತಿ ಅನ್ನಪೂರ್ಣಮ್ಮ
ನಿಧನ : 28.04.2012

ಶ್ರೀ ಎನ್. ಸತೀಶ್ (ನಾಯಕ)
ನಿಧನ : 23.04.2016

ಕಣ್ಣಿಗೆ ದೂರ ಮನಸ್ಸಿಗೆ ಹತ್ತಿರ...
ದಣಿವರಿಯದ ಅತಿಥಿ ಸತ್ಕಾರ, ಕೌಟುಂಬಿಕ ಕಾಳಜಿ
ಇವು ನಿಮ್ಮ ಬಳುವಳಿ... ನಿಮ್ಮ ನೆನಪು... ನಿಮ್ಮ ಶ್ರೇಷ್ಠ ಸಂಸ್ಕಾರ,
ಶಿಸ್ತು, ಆದರ್ಶ ನಮ್ಮೆಲ್ಲರ ಪಾಲಿಗೆ ದಾರಿ ದೀಪವಾಗಿವೆ.
ಅನುದಿನವೂ ನಿಮ್ಮ ಸ್ಮರಣೆಯಲ್ಲಿರುವ...


ಪ್ರೊ. ಸಿ. ನರಸಿಂಹಪ್ಪ ಮತ್ತು ಕುಟುಂಬ ವರ್ಗ

## ಬೆಳ್ಳೂಡಿ ಆಂಜನೇಯ ರಥೋತ್ಸವ



ಹರಿಹರ, ಏ.22- ನಗರದ ಹೊರವಲಯದ ಬೆಳ್ಳೂಡಿ ಗ್ರಾಮದಲ್ಲಿರುವ ಶ್ರೀ ಆಂಜನೇಯ ಸ್ವಾಮಿ ರಥೋತ್ಸವವು ನಡೆಯಿತು. ಈ ಸಂದರ್ಭದಲ್ಲಿ ಗ್ರಾಮದ ಭಕ್ತರು ಪಾಲ್ಗೊಂಡು ದೇವರ ಕೃಪೆಗೆ ಪಾತ್ರರಾದರು.

## ಸಿದ್ಧ ಕಣ್ಣಿನ ಹನಿ ಹಾಕುವ ಇಂದಿನ ಕಾರ್ಯಕ್ರಮ ಮುಂದೂಡಿಕೆ



ಶ್ರೀ ಈಶ್ವರ-ಪಾರ್ವತಿ-ಗಣಪತಿ ದೇವಸ್ಥಾನದ ಆವರಣದಲ್ಲಿ ಇಂದು ಬೆಳಿಗ್ಗೆ 10 ರಿಂದ 11 ರವರೆಗೆ ಹಮ್ಮಿಕೊಳ್ಳಲಾಗಿದ್ದ ಸಿದ್ಧ ಕಣ್ಣಿನ ಹನಿ ಹಾಕುವ ಉಚಿತ ಕಾರ್ಯಕ್ರಮವನ್ನು ಕೊರೊನಾ ಹೆಚ್ಚಾಗುತ್ತಿರುವ ಹಿನ್ನೆಲೆಯಲ್ಲಿ ಮುಂದೂಡಲಾಗಿದೆ ಎಂದು ಶಿಬಿರದ ವ್ಯವಸ್ಥಾಪಕರು ತಿಳಿಸಿದ್ದಾರೆ. ಹೆಚ್ಚಿನ ಮಾಹಿತಿಗಾಗಿ ಎಂ.ಮೋಕ್ಷಾನಂದ, ಬಿ.ಎಸ್. ವೀರೇಶ್ (88676-91155), ಕೆ.ಎಂ. ವೀರಭದ್ರಯ್ಯ (94493-88354), ಆರ್.ಕೆ.ಎಂ. ಕಂಬಾಳೇಶ್ (94484-42 713), ಎನ್.ಎಂ. ತಿಪ್ಪೇಸ್ವಾಮಿ (98868-74078) ಅವರನ್ನು ಸಂಪರ್ಕಿಸಿ.

## ಬೀಗ ಹಾಕಿದ್ದ ಮನೆಗೆ ಕನ್ನ

ದಾವಣಗೆರೆ, ಏ.22- ಹಬ್ಬಕ್ಕೆಂದು ಮನೆಗೆ ಬೀಗ ಹಾಕಿ ತೆರಳಿದ್ದನ್ನು ಬಂಡವಾಳವಾಗಿಸಿಕೊಂಡು ಕನ್ನ ಹಾಕಿರುವ ಕಳ್ಳರು 35 ಸಾವಿರ ಮೌಲ್ಯದ 10 ಗ್ರಾಂ ಬಂಗಾರ, 39 ಸಾವಿರ ನಗದು ದೋಚಿರುವ ಘಟನೆ ಮಲೇಬೆನ್ನೂರು ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ನಡೆದಿದೆ. ಹರಿಹರ ತಾಲ್ಲೂಕು ಕಡರನಾಯ್ಕನ ಹಳ್ಳಿ ಗ್ರಾಮದ ಕೂಲಿ ಕಾರ್ಮಿಕ ದೇವರಾಜ ಎಂಬಾತ ಕುಟುಂಬ ಸಮೇತ ರಾಣೇಬೆನ್ನೂರು ತಾ. ಐರಣಿ ಗ್ರಾಮದಲ್ಲಿನ ಹಬ್ಬಕ್ಕೆಂದು ಬುಧವಾರ ರಾತ್ರಿ ಮನೆಗೆ ಬೀಗ ಹಾಕಿಕೊಂಡು ತೆರಳಿದ್ದರು. ಈ ವೇಳೆ ಮನೆ ಬಾಗಿಲು ಮುರಿದು ಒಳನುಗ್ಗಿ ಕಳ್ಳತನ ಮಾಡಿರುವುದು ಇಂದು ಬೆಳಕಿಗೆ ಬಂದಿದೆ.

# ಕಟ್ಟಡ, ಕೃಷಿ, ಕೈಗಾರಿಕೆಗಳಿಗೆ ವಾರದ ನಿರ್ಬಂಧವಿಲ್ಲ

(1ನೇ ಪುಟದಿಂದ) ಅನುಮತಿ ನೀಡಲಾಗಿದೆ ಎಂದು ಬೀಳಗಿ ತಿಳಿಸಿದ್ದಾರೆ.

ಬ್ಯಾಂಕು, ವಿಮೆ, ಮುದ್ರಣ - ಎಲೆಕ್ಟ್ರಾನಿಕ್ ಮಾಧ್ಯಮ, ಇ - ಕಾಮರ್ಸ್ ಸರಕು ಪೂರೈಕೆ, ಗೋದಾಮು ಸೇವೆ, ಖಾಸಗಿ ಭದ್ರತಾ ಸೇವೆಗಳಿಗೆ ಅನುಮತಿ ಇದೆ. ಕಟಿಂಗ್ ಶಾಪ್, ಬ್ಯೂಟಿ ಪಾರ್ಲರ್ ಹಾಗೂ ಸೆಲೂನ್‌ಗಳು ಕೊರೊನಾ ಸಮಯೋಚಿತ ವರ್ತನೆಯೊಂದಿಗೆ ಕಾರ್ಯ ನಿರ್ವಹಿಸಬೇಕು ಎಂದವರು ಹೇಳಿದ್ದಾರೆ.

**ಲಸಿಕೆಗೆ ಬೇಡಿಕೆ :** ಲಸಿಕೆ ನೀಡಲು ಆರಂಭಿಸಿದ ಮೊದಲ ದಿನಗಳಲ್ಲಿ ಕೆಲವರಷ್ಟೇ ಲಸಿಕೆ ಪಡೆಯಲು ಬರುತ್ತಿದ್ದರು. ಆಗ ಲಸಿಕೆ ಹೆಚ್ಚು ಪೋಲಾಗುತ್ತಿತ್ತು. ಈಗ ಪ್ರತಿದಿನ 5-6 ಸಾವಿರದಷ್ಟು ಲಸಿಕೆ ಬೇಡಿಕೆ ಇದೆ. ಹೆಚ್ಚು ಜನರು ಲಸಿಕೆ ಪಡೆಯುತ್ತಿರುವುದರಿಂದ ಪೋಲಾಗುವುದು ಕಡಿಮೆ ಆಗಿದೆ ಎಂದು ಡಿಸಿ ಹೇಳಿದರು.



**80 ಲಕ್ಷ ರೂ. ದಂಡ :** ಜಿಲ್ಲೆಯಲ್ಲಿ ಮಾಸ್ಕ್ ಹಾಕದೇ ಇರುವವರ ವಿರುದ್ಧ ಒಟ್ಟು 48,882 ಪ್ರಕರಣಗಳನ್ನು ದಾಖಲು ಮಾಡಿ ಏ.21 ರವರೆಗೆ 80,73,837 ದಂಡ ವಿಧಿಸಲಾಗಿದೆ ಎಂದು ಜಿಲ್ಲಾಧಿಕಾರಿ ಮಾಹಿತಿ ನೀಡಿದರು.

**ಸಂಚಾರಕ್ಕೆ ಅಡ್ಡಿಯಲ್ಲ :** ಲಾಕ್‌ಡೌನ್ ಹಾಗೂ ಈಗ ಜಾರಿಗೆ ತಂದಿರುವ ಮಾರ್ಗ ಸೂಚಿಗಳ ನಡುವಿನ ವ್ಯತ್ಯಾಸದ ಬಗ್ಗೆ ತಿಳಿಸಿದ ಎಸ್ಪಿ ಹನುಮಂತರಾಯ, ಈ ಬಾರಿ ಜನರ ಸಂಚಾರದ ಮೇಲೆ ನಿರ್ಬಂಧ ಇಲ್ಲ. ಆದರೆ, ಜನರು ಅಗತ್ಯವಾಗಿರುವ ಸಂದರ್ಭದಲ್ಲಿ ಮಾತ್ರ ಪ್ರಯಾಣ ಮಾಡಬೇಕು ಎಂದು ತಿಳಿಸಿದರು.

ಪತ್ರಿಕಾಗೋಷ್ಠಿಯಲ್ಲಿ ಉಪ ವಿಭಾಗಾಧಿಕಾರಿ ಮಮತಾ ಹೊಸಗೌಡರ್, ಪಾಲಿಕೆ ಆಯುಕ್ತ ವಿಶ್ವನಾಥ ಮುದಜ್ಜಿ, ಜಿಲ್ಲಾ ಆರೋಗ್ಯಾಧಿಕಾರಿ ಡಾ. ನಾಗರಾಜ್, ಜಿಲ್ಲಾ ಸರ್ಜನ್ ಡಾ. ಜಯಪ್ರಕಾಶ್ ಮತ್ತಿತರರು ಉಪಸ್ಥಿತರಿದ್ದರು.

## ಮುಂದೂಡಿಕೆ

ದಾವಣಗೆರೆ, ಏ.22- ನಾಡಿದ್ದು ದಿನಾಂಕ 24 ರಂದು ನಡೆಯಬೇಕಾಗಿದ್ದ ಕರ್ನಾಟಕ ರಾಜ್ಯ ವಿಜ್ಞಾನ ಪರಿಷತ್ ಬೆಂಗಳೂರು ದಕ್ಷಿಣ ಜಿಲ್ಲೆಯ ಸಮಿತಿ ರಚನಾ ಸಭೆಯನ್ನು ಕೋವಿಡ್ ಹೆಚ್ಚಾಗುತ್ತಿರುವ ಹಿನ್ನೆಲೆಯಲ್ಲಿ ಮುಂದೂಡಲಾಗಿದೆ ಎಂದು ಕರಾವಿಪ ಗೌರವ ಕಾರ್ಯದರ್ಶಿ ಕೃಷ್ಣೇಗೌಡ ತಿಳಿಸಿದ್ದಾರೆ.

## ಕೊಮಾರನಹಳ್ಳಿ ತೇರು ರದ್ದು

ಮಲೇಬೆನ್ನೂರು, ಏ.22 - ಇದೇ ದಿನಾಂಕ 27 ರಂದು ನಡೆಯಬೇಕಾಗಿದ್ದ ಕೊಮಾರನ ಹಳ್ಳಿಯ ಹೆಳವನಕಟ್ಟೆ ಶ್ರೀ ಲಕ್ಷ್ಮಿ ರಂಗನಾಥ ಸ್ವಾಮಿಯ ರಥೋತ್ಸವವನ್ನು ಕೊರೊನಾ ಹಿನ್ನೆಲೆಯಲ್ಲಿ ಸರ್ಕಾರ ಹಾಗೂ ಜಿಲ್ಲಾಧಿಕಾರಿಗಳ ಸೂಚನೆ ಮೇರೆಗೆ ರದ್ದು ಪಡಿಸಲಾಗಿದೆ ಎಂದು ದೇವಸ್ಥಾನದ ಆಡಳಿತಾಧಿಕಾರಿಗಳೂ ಆದ ಉಪ ತಹಶೀಲ್ದಾರ್ ಆರ್.ರವಿ ತಿಳಿಸಿದ್ದಾರೆ.

ಗ್ರಾಮಸ್ಥರು ಕೋವಿಡ್ ನಿಯಮ ಪಾಲಿಸಿಕೊಂಡು ತಮ್ಮ ಮನೆಯಲ್ಲೇ ಹಬ್ಬ ಆಚರಣೆ ಮಾಡಿಕೊಳ್ಳಬಹುದೆಂದು ಹೇಳಲಾಗಿದೆ.

## ರೆಮಿಡಿಸಿವಿರ್ ಅಕ್ರಮ: ಬಂಧನ

(1ನೇ ಪುಟದಿಂದ) ಈ ಬಗ್ಗೆ ಮಾಹಿತಿ ನೀಡಿದ್ದಾರೆ. ತಕ್ಷಣವೇ ಸಿಬ್ಬಂದಿ ತಂಡದೊಂದಿಗೆ ಬಂದ ಅರವಿಂದ್ ಅವರು ಔಷಧಿ ಪರಿವೀಕ್ಷಕಿ ಗೀತಾ ಒಳಗೊಂಡ ತಂಡದೊಂದಿಗೆ ಸಿಜಿ ಆಸ್ಪತ್ರೆಯ ಹಿಂಭಾಗದ ಗೇಟ್ ನ ಬಾಪೂಜಿ ಆಸ್ಪತ್ರೆ ಎದುರಿನ ಆಟೋ ಸ್ಟ್ಯಾಂಡ್ ಬಳಿ ಕೋವಿಡ್ ಇಂಜೆಕ್ಷನ್ ಆದ ರೆಮ್‌ಡಿಸಿವಿರ್ ಔಷಧಿಗಳನ್ನು ಆಟೋದಲ್ಲಿಟ್ಟುಕೊಂಡು ಸಾರ್ವಜನಿಕರಿಗೆ ಅಕ್ರಮವಾಗಿ ಮಾರಾಟ ಮಾಡುತ್ತಿದ್ದದ್ದು ಕಂಡು ಬಂದಿದೆ. ತಕ್ಷಣವೇ ಸಾಕ್ಷಿ ಸಹಿತ ದಿನಗೂಲಿ ಗಣೇಶಪ್ಪನನ್ನು ಬಂಧಿಸಿ, ಈತನಲ್ಲಿದ್ದ 9 ಔಷಧಿ ಬಾಟಲಿಗಳನ್ನು ವಶಪಡಿಸಿಕೊಂಡು ಹೆಚ್ಚಿನ ವಿಚಾರಣೆ ಮಾಡಿದಾಗ, ಸಿಜಿ ಆಸ್ಪತ್ರೆಯ ಫಾರ್ಮಾಸಿಸ್ಟ್ ಮಂಜುನಾಥನು ಅಕ್ರಮವಾಗಿ ಮಾರಾಟ ಮಾಡಲು ನೀಡಿದ್ದು, ಬಂದ ಹಣದಲ್ಲಿ ಇಬ್ಬರು ಹಂಚಿಕೊಳ್ಳೋಣ ಎಂದು ಹೇಳಿರುವುದಾಗಿ ಗಣೇಶಪ್ಪ ಬಾಯಿ ಬಿಟ್ಟಿದ್ದಾನೆ. ಕೂಡಲೇ ಸಿಜಿ ಆಸ್ಪತ್ರೆಯ ಫಾರ್ಮಾಸಿಸ್ಟ್ ಮಂಜುನಾಥನನ್ನು ವಶಕ್ಕೆ ಪಡೆದು ಒಟ್ಟು 9 ಕೋವಿಡ್ ಇಂಜೆಕ್ಷನ್ ಆದ ರೆಮ್‌ಡಿಸಿವಿರ್ ಔಷಧಿಗಳು, 10 ಸಾವಿರ ನಗದು, ಒಂದು ಆಟೋ ವಶಪಡಿಸಿಕೊಳ್ಳಲಾಗಿದೆ.

ಈ ಸಂಬಂಧ ಬಡಾವಣೆ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ಹೆಚ್ಚಿನ ತನಿಖೆ ಕೈಗೊಳ್ಳಲಾಗಿದೆ.

**ಫಾರ್ಮಾಸಿಸ್ಟ್ ಅಮಾನತ್ತು:** ಕೋವಿಡ್ ಔಷಧಿಗಳ ಅಕ್ರಮ ಮಾರಾಟದ ಪ್ರಮುಖ ಆರೋಪಿ ಮಂಜುನಾಥನನ್ನು ಜಿಲ್ಲಾಸ್ಪತ್ರೆಯ ಫಾರ್ಮಾಸಿಸ್ಟ್ ಸೇವೆಯಿಂದ ಈ ತಕ್ಷಣದಿಂದ ಅಮಾನತ್ತುಗೊಳಿಸ ಲಾಗಿದೆ. ಈತನಿಗೆ ಸಾಥ್ ನೀಡಿದ ದಿನಗೂಲಿ ಕೆಲಸಗಾರ ಗಣೇಶಪ್ಪನನ್ನು ಕರ್ತವ್ಯದಿಂದ ವಜಾಗೊಳಿಸಲು ಸಂಬಂಧಿಸಿದ ಸಂಸ್ಥೆಗೆ ಸೂಚಿಸಿರುವುದಾಗಿ ಜಿಲ್ಲಾಧಿಕಾರಿ ಮಹಾಂತೇಶ್ ಬೀಳಗಿ ತಿಳಿಸಿದ್ದಾರೆ.

## ಆಕ್ಸಿಜನ್ ಕೇಳಿದವನ ಕಪಾಳಕ್ಕೆ ಬಾರಿಸುವೆ ಎಂದ ಕೇಂದ್ರ ಸಚಿವ

ದಮೋಹ್ (ಮಧ್ಯ ಪ್ರದೇಶ), ಏ. 22 – ಕೊರೊನಾ ಸೋಂಕಿನಿಂದ ಬಳಲುತ್ತಿರುವ ತನ್ನ ತಾಯಿಗೆ ಆಕ್ಸಿಜನ್ ಸಿಲಿಂಡರ್ ಪೂರೈಸುವಂತೆ ಆಗ್ರಹಿಸಿದ ವ್ಯಕ್ತಿಯೊಬ್ಬರಿಗೆ ಕೇಂದ್ರ ಸಂಸ್ಕೃತಿ ಸಚಿವ ಪ್ರಹ್ಲಾದ್ ಪಟೇಲ್ ಅವರು ಕಪಾಳಕ್ಕೆ ಬಾರಿಸುತ್ತೇನೆ ಎಂದು ಹೇಳಿದ ವಿಡಿಯೋ ವೈರಲ್ ಆಗಿದೆ.

ಪಟೇಲ್ ದಮೋಹ್ ಕ್ಷೇತ್ರವನ್ನು ಪ್ರತಿನಿಧಿಸುತ್ತಿದ್ದಾರೆ. ಜಿಲ್ಲಾ ಆಸ್ಪತ್ರೆಯಲ್ಲಿ ಎರಡು ದಿನಗಳ ಹಿಂದೆ ಆಕ್ಸಿಜನ್ ಸಿಲಿಂಡರ್‌ಗಳನ್ನು ಲೂಟಿ ಮಾಡಲಾಗಿತ್ತು. ಆಸ್ಪತ್ರೆಗೆ ಸಚಿವರು ಭೇಟಿ ನೀಡಿದ ಸಂದರ್ಭದಲ್ಲಿ ವ್ಯಕ್ತಿಯೋರ್ವ, ತನ್ನ ತಾಯಿಗಾಗಿ ಆಕ್ಸಿಜನ್ ಸಿಲಿಂಡರ್ ಪೂರೈಸುವಂತೆ ಕೇಳಿದ.

ತಾಯಿ ಆಸ್ಪತ್ರೆಗೆ ಬಂದು 36 ಗಂಟೆಗಳಾದರೂ ಯಾರೊಬ್ಬರೂ ಕಾಳಜಿ ವಹಿಸಿಲ್ಲ ಎಂದು ದೂರಿದ ವ್ಯಕ್ತಿ, ಮಾತನಾಡುವಾಗ ಪಟೇಲ್ ಕಡೆ ಬೆರಳು ತೋರಿಸಿದ.

ಇದರಿಂದ ಕುಪಿತರಾದ ಸಚಿವರು, ಈ ರೀತಿ ಮಾತನಾಡಿದರೆ ಕಪಾಳಕ್ಕೆ ಎರಡು ಬಾರಿಸುತ್ತೇನೆ ಎಂದು ಹೇಳಿದರು. ಇದಕ್ಕೆ ಉತ್ತರಿಸಿದ ವ್ಯಕ್ತಿ, ನನ್ನ ತಾಯಿ ಈಗಾಗಲೇ ಬಳಲುತ್ತಿದ್ದಾರೆ. ನಾನು ಹೊಡೆತ ತಿನ್ನಲು ಸಿದ್ಧನಿದ್ದೇನೆ. ಏನು ಮಾಡಬೇಕು ಹೇಳಿ? ಎಂದು ಕೇಳಿದ್ದಾರೆ. ಈ ಘಟನೆಯ ವಿಡಿಯೋ ಚಿತ್ರೀಕರಣವಾಗುತ್ತಿದೆ ಎಂಬುದನ್ನು ಗಮನಿಸಿದಂತೆ ಕಂಡು ಬಂದ ಪಟೇಲ್, ಯಾರಾದರೂ ಆಕ್ಸಿಜನ್ ನಿರಾಕರಿಸಿದ್ದಾರಾ? ಎಂದು ವ್ಯಕ್ತಿಗೆ ಕೇಳಿದರು.

ಆಕ್ಸಿಜನ್ ಕೊಟ್ಟಿಲ್ಲ ಎಂದು ವ್ಯಕ್ತಿ ಕ್ಷೀಣ ದನಿಯಲ್ಲಿ ಹೇಳಿದ್ದು ವಿಡಿಯೋದಲ್ಲಿದೆ.

## ಕೊರೊನಾ ನಿಯಮ ಉಲ್ಲಂಘನೆ : ಇಬ್ಬರು ಹೋಟೆಲ್ ಮಾಲೀಕರ ವಶ

ದಾವಣಗೆರೆ, ಏ.22- ಕೊರೊನಾ ನಿಯಮ ಉಲ್ಲಂಘಿಸಿ, ನಿರ್ಲಕ್ಷದಿಂದ ವ್ಯಾಪಾರ ನಡೆಸಿದ ಆರೋಪದಡಿ ಇಂದು ಇಬ್ಬರು ಹೋಟೆಲ್ ಮಾಲೀಕರನ್ನು ವಶಕ್ಕೆ ಪಡೆದು ಇವರಿಬ್ಬರ ವಿರುದ್ಧ ಪ್ರತ್ಯೇಕವಾಗಿ ಆಜಾದ್ ನಗರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಿಸಲಾಗಿದೆ.

ಮುಖ ಗವಸು ಧರಿಸಿ, ಸಾಮಾಜಿಕ ಅಂತರವನ್ನು ಕಾಯ್ದುಕೊಂಡು ವ್ಯಾಪಾರ ಮತ್ತು ಖರೀದಿಗೆ ಅವಕಾಶವಿದ್ದರೂ ನಗರದ ಮಾಗಾನಹಳ್ಳಿ ರಸ್ತೆಯ ಅಕ್ಸಾ ಮಸೀದಿಯ ಕಾಂಪ್ಲೆಕ್ಸ್‌ನಲ್ಲಿರುವ ಟೀ ಸ್ಟಾಲ್ ಹೋಟೆಲ್ ನಲ್ಲಿ ಮಾಲೀಕ ಮೊಹಮ್ಮದ್ ಗೌಸ್ ಎಂಬಾತ ಕೊರೊನಾ ನಿಯಮ ಉಲ್ಲಂಘನೆಯಾಗುವಂತೆ ಹೆಚ್ಚಿನ ಜನರನ್ನು ಸೇರಿಸಿಕೊಂಡು ಗುಂಪಾಗಿ ಕುಳಿತುಕೊಂಡು ಸೂಕ್ತ ಸಾಮಾಜಿಕ ಅಂತರ ಕಾಪಾಡದೇ ವ್ಯಾಪಾರ ಮಾಡುತ್ತಿದ್ದ. ಬೈಕ್ ನಲ್ಲಿ ರೌಂಡ್ಸ್ ಮಾಡುತ್ತಾ ಜನಜಾಗೃತಿ ಮೂಡಿಸುತ್ತಿದ್ದ ಠಾಣೆ ಪಿಎಸ್ ಐ ರವೀಂದ್ರ ಕಾಳಭೈರವ ಮತ್ತು ಸಿಬ್ಬಂದಿಗಳ ತಂಡ ದಾಳಿ ನಡೆಸಿದೆ.

ಉದ್ದೇಶಪೂರ್ವಕವಾಗಿ ರೋಗವು ಹರಡುವಂತೆ ಜನರನ್ನು ಗುಂಪು ಕಟ್ಟಿಕೊಂಡು ವ್ಯಾಪಾರ ಮಾಡುತ್ತಿದ್ದರಿಂದ ಸೂಕ್ತ ಮುಂಜಾಗ್ರತಾ ಕ್ರಮವನ್ನು ಅನುಸರಿಸಿ ಹೋಟೆಲ್ ಮಾಲೀಕನನ್ನು ವಶಕ್ಕೆ ಪಡೆಯಲಾಗಿದೆ.

ಅಂತೆಯೇ ಕೆ.ಆರ್. ರಸ್ತೆಯ ಜಗಳೂರು ಬಸ್ ನಿಲ್ದಾಣ ಎದುರಿನ ಪವನ್ ಬೆಣ್ಣೆ ದೋಸೆ ಹೋಟೆಲ್ ಮಾಲೀಕ ಬಿ.ಕೆ. ಗಿರೀಶ್ ಸಹ ರೋಗವು ಹರಡುವಂತೆ ಜನರನ್ನು ಗುಂಪು ಕಟ್ಟಿಕೊಂಡು ವ್ಯಾಪಾರ ಮಾಡುತ್ತಿದ್ದಾಗ ಪಿಎಸ್‌ಐ ಕೆ.ಎನ್. ಶೈಲಜಾ ದಾಳಿ ನಡೆಸಿ, ಈತನನ್ನು ವಶಕ್ಕೆ ಪಡೆದಿದ್ದಾರೆ.

**ಬಿಲ್ಡಿಂಗ್ ಬಾಡಿಗೆಗಿದೆ**
ಚಾಮರಾಜಪೇಟೆ ಸರ್ಕಲ್ ಹತ್ತಿರ, ಕಲ್ಲೇಶ್ವರ ಕಿರಾಣಿ ಅಂಗಡಿ ಮೇಲ್ಭಾಗದಲ್ಲಿ 3 ಮಹಡಿ ಇರುವ 10,000 ಚದುರ ಅಡಿ ವಿಶಾಲವಾದ ಜಾಗ ಇರುವ ಬಿಲ್ಡಿಂಗ್ ಬಾಡಿಗೆಗಿದೆ. ಸಂಪರ್ಕಿಸಿ :
ಮೊ. : 98453 17181

**ಬಂಗ್ಲೆ ಮನೆ ಸೈಟು ಮಾರಾಟಕ್ಕೆ**
ಆಂಜನೇಯ ಬಡಾವಣೆ, ವಿದ್ಯಾನಗರ ವಿನಾಯಕ ಬಡಾವಣೆಯಲ್ಲಿ
ಸೈಟು : 50x80, 70x50, 70x70, 60x40, 50x100. ಮನೆ : 80x100, 50x100, 90x100, 60x60, 40x60 (Duplex)
ಕಿರಣ್ ಬೂಸ್ನೂರ್ (ಏಜೆಂಟ್)
97315-63409, 98440-63409
(ಬಂಗ್ಲೆ ಮನೆ ಲೀಸ್ ಗೆ ಇದೆ)

**ಜೈ ಶ್ರೀಮನ್ನಾರಾಯಣ**
ವಿಕಾಸ ತರಂಗಿಣಿ, ದಾವಣಗೆರೆ
25ನೇ ವರ್ಷದ
ಉಚಿತ ಮಜ್ಜಿಗೆ ವಿತರಣೆ ಕಾರ್ಯಕ್ರಮ
ಏಪ್ರಿಲ್ 1 ರಿಂದ ಮೇ 15ರವರೆಗೆ.
ಸ್ಥಳ : ಮಹಾನಗರ ಪಾಲಿಕೆ ಆವರಣ
ಇಂದಿನ ಮಜ್ಜಿಗೆ ಪ್ರಾಯೋಜಕರು :
ದಿ.ಶ್ರೀ ಬಾಲನಾಗು ವೆಂಕಟರಾಜು ದಿ.ಶ್ರೀಮತಿ ರಾಮಲಕ್ಷ್ಮಿ ಇವರ ಜ್ಞಾಪಕಾರ್ಥವಾಗಿ
ಶ್ರೀ ಬಾಲಾಜಿ ಗೋಲ್ಡ್ ಪ್ಯಾಲೇಸ್ ಇವರ ಸೇವಾರ್ಥ

**ಸೈಟ್‌ಗಳು ಮಾರಾಟಕ್ಕಿವೆ**
ವಿನಾಯಕ ಬಡಾವಣೆಯಲ್ಲಿ 30x40 ದಕ್ಷಿಣ, ಶಿವ ಪಾರ್ವತಿ ಬಡಾವಣೆಯಲ್ಲಿ 30x48 ಪೂರ್ವ, 30x48 ಪಶ್ಚಿಮ, ಬನಶಂಕರಿ ಬಡಾವಣೆಯಲ್ಲಿ 40x33 ಪಶ್ಚಿಮ, ಸ್ವಾಮಿ ವಿವೇಕಾನಂದ ಬಡಾವಣೆಯಲ್ಲಿ 30x50 ಉತ್ತರ.
ಸ್ವಾಮಿ ಏಜೆಂಟ್ ವಿದ್ಯಾನಗರ
97421 44715

**ಡ್ರೈವರ್ ಬೇಕಾಗಿದ್ದಾರೆ**
ಕೋರಿಯರ್ ಕಂಪನಿಯಲ್ಲಿ TATA ACE ನಡೆಸಲು ಡ್ರೈವರ್‌ಗಳು ಬೇಕಾಗಿದ್ದಾರೆ. ಕೂಡಲೇ ಸಂಪರ್ಕಿಸಿ
91139 65957
91641 60172

**House for sale**
2BHK, Fully furnished, independent house with car parking. Siddveerappa Layout, 2nd cross road, Davangere. Contact No.
88847 56252

**JOBS**
MCS ACADEMY
Training & Placement Cell
98444 92888

**ಮಳಿಗೆ / ಮನೆಗಳು ಬಾಡಿಗೆಗೆ / ಲೀಸ್‌ಗಿವೆ**
3BHK ಗ್ರೌಂಡ್ ಫ್ಲೋರ್ ಮನೆ ಮತ್ತು ಮಳಿಗೆ, 2BHK 1 ಮತ್ತು 2ನೇ ಮಹಡಿ ಸುಸಜ್ಜಿತ ಮನೆಗಳು ಬಸವೇಶ್ವರ ಬಡಾವಣೆ ಮುಖ್ಯ ರಸ್ತೆಗೆ ಹೋಟೆಲ್ ಸಾಯಿ ಇಂಟರ್ ನ್ಯಾಷನಲ್ ಹಿಂಭಾಗ, ದಾವಣಗೆರೆ ಇಲ್ಲಿ ಬಾಡಿಗೆಗೆ / ಲೀಸ್‌ಗಿವೆ ಸಂಪರ್ಕಿಸಿ
9844132621, 9448113829
9740590797

**ಮಾರಾಟಕ್ಕಿದೆ**
ಪ್ರಸಿದ್ದ ಏರಿಯಾದ ಮುಖ್ಯ ರಸ್ತೆಯಲ್ಲಿ 8 ವರ್ಷಗಳಿಂದ ನಡೆಸಿಕೊಂಡು ಬಂದಿರುವ ಸುಸಜ್ಜಿತವಾದ ಸೂಪರ್ ಮಾರ್ಕೆಟ್ ಮಾರಾಟಕ್ಕೆ ಇದೆ.
ಫೋ. : 90086 40109

**Shop For Sale**
20x40 Shop for sale, Bamboo bazaar, Main road.
Call
98440 61464

**Industrial Site ಮಾರಾಟಕ್ಕಿದೆ**
ಪಿ.ಬಿ. ರಸ್ತೆಗೆ ಇರುವ ಸಬ್ ರಿಜಿಸ್ಟ್ರಾರ್ ಆಫೀಸ್ ಎದುರು MRF Show Room ಮತ್ತು ಮೆಟ್ರೋ ಟಾರ್ಪಾಲಿನ್ ಮಧ್ಯೆ ಹಾದು ಹೋಗುವ ರಸ್ತೆಗೆ 25x88 ಅಡಿ ಅಳತೆಯ ಇಂಡಸ್ಟ್ರಿಯಲ್ ಸೈಟು ಮಾರಾಟಕ್ಕಿದೆ. ಸಂಪರ್ಕಿಸಿ:
Mohan Real Estate Agencies
97424 34049

**ಮನೆ ಬಾಡಿಗೆಗಿದೆ**
ಎಂ.ಸಿ.ಸಿ. 'ಎ' ಬ್ಲಾಕ್ ಉಪಾಸಿ ಕ್ಲಿನಿಕ್ ಹತ್ತಿರ ಡೋರ್ ನಂ.2127 ಚಂದ್ರ ಶ್ರೀ ನಿಲಯ ಗ್ರೌಂಡ್ ಫ್ಲೋರ್‌ನಲ್ಲಿ 3 ಬೆಡ್ ರೂಂ, ಕಾರ್ ಪಾರ್ಕಿಂಗ್, ಮುನ್ಸಿಪಲ್ ಹಾಗು ಬೋರ್ ನೀರಿನ ಸೌಕರ್ಯವಿರುವ ಮನೆ ಬಾಡಿಗೆಗಿದೆ. (ಸಸ್ಯಹಾರಿಗಳಿಗೆ ಮಾತ್ರ) ಸಂಪರ್ಕಿಸಿ
ಮೊ: 97402 32373

**2 BHK House For Lease/Rent**
# 1430 LIC Colony, near Nutana College.
Contact :
90089 52333
73382 43777

**ಬೇಕಾಗಿದ್ದಾರೆ**
ಮೆಡಿಕಲ್ ಶಾಪ್‌ನಲ್ಲಿ ಬಿ.ಎ. ಅಥವಾ ಇತರೆ ವಿಷಯಗಳಲ್ಲಿ ಅನುಭವವಿರುವ ಓರ್ವ ಹಾಗೂ ಮೆಡಿಕಲ್ ಸ್ಟೋರ್‌ನಲ್ಲಿ ಔಷಧಿ ವಿತರಣೆಯಲ್ಲಿ ಅನುಭವವಿರುವ ಇಬ್ಬರು ಬೇಕಾಗಿದ್ದಾರೆ. ಸಂಪರ್ಕಿಸಿ
97434 47076
70192 49897

**House To-Let**
2BHK 'Santrupthi'
# 1640/66-67, Saraswati Badavane, Davanagere.
Veg only
94484 46708

**ಸೈಟು ಮಾರಾಟಕ್ಕಿದೆ**
ಶಿವಕುಮಾರ ಸ್ವಾಮಿ ಬಡಾವಣೆ, 2ನೇ ಹಂತದಲ್ಲಿ ಮುಖ್ಯ ರಸ್ತೆಗೆ 55x40 ಅಳತೆಯ ದಕ್ಷಿಣ ಮತ್ತು ಪಶ್ಚಿಮ ರಸ್ತೆ ಇರುವ ಸಂಜೀವಿನಿ ಆಂಜನೇಯ ದೇವಸ್ಥಾನದ ರಸ್ತೆ, 7ನೇ ಕ್ರಾಸ್ ಕಾರ್ನರ್ ಸೈಟ್ ಮಾರಾಟಕ್ಕಿದೆ. ಸಂಪರ್ಕಿಸಿ
94483 73997
97318 25700

**Wanted Experience Gents Lecturers**
Subjects :Economics - 03
Accountancy - 03
Business studies - 03
Statistics - 03
94497 02778, 94819 09493

**ತಕ್ಷಣ ಬೇಕಾಗಿದ್ದಾರೆ**
ಸ್ಯಾಮ್ಸನ್ ಡಿಸ್ಟಿಲರೀಸ್, ದುಗ್ಗಾವತಿ ಹಾಗೂ SS ಆಸ್ಪತ್ರೆ, ಬಾಪೂಜಿ ಆಸ್ಪತ್ರೆ ಹಾಗೂ ದಾವಣಗೆರೆ ಸುತ್ತಮುತ್ತಲು 8 ಗಂಟೆ ಹಾಗೂ 12 ಗಂಟೆ ಕೆಲಸ ಮಾಡಲು ಸೆಕ್ಯೂರಿಟಿ ಗಾರ್ಡ್ಸ್ ತಕ್ಷಣ ಬೇಕಾಗಿದ್ದಾರೆ. ESI-PF ಸೌಲಭ್ಯ ಇರುತ್ತದೆ.
ಅಸೋಸಿಯೇಟೆಡ್ ಎಂಟರ್ ಪ್ರೈಸಸ್, ದಾವಣಗೆರೆ.
99169 29713, 90605 45500, 97390 89022

**ಸಾಲಗಳಿಗೆ ಸಂಪರ್ಕಿಸಿ**
(ಬಡ್ಡಿ ದರ ವಾರ್ಷಿಕ 7% ರಿಂದ ಪ್ರಾರಂಭ)
ಮನೆ ಕಟ್ಟಲು, ಮನೆ ಖರೀದಿ, ಸೈಟ್ ಖರೀದಿ, ಕಟ್ಟಿರುವ ಮನೆಗೆ ಸಾಲ, ಬೇರೆ ಬ್ಯಾಂಕ್‌ನಲ್ಲಿ ತೆಗೆದುಕೊಂಡಿರುವ ಸಾಲ ವರ್ಗಾವಣೆ ಮತ್ತು ಅಧಿಕ ಸಾಲಕ್ಕಾಗಿ ಸಂಪರ್ಕಿಸಿ.
(ಸಂಬಳ ಮತ್ತು ವ್ಯವಹಾರದಾರರಿಗೆ ಮಾತ್ರ)
73385 80345

**ಮನೆ/ಆಫೀಸ್ ಶಿಫ್ಟಿಂಗ್**
ಮನೆ ಮತ್ತು ಆಫೀಸ್ ಶಿಫ್ಟಿಂಗ್ ಹಾಗೂ ವಾಟರ್ ಟ್ಯಾಂಕನ್ನು ಮಿಷನ್‌ನಲ್ಲಿ ಕ್ಲೀನ್ ಮಾಡಲಾಗುವುದು.
99863 61250
91132 85992

**ಓದುಗರ ಗಮನಕ್ಕೆ**
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ - ವಸ್ತು ಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

**UPS BATTERY & RO PURIFIERS**
Sales & Service
PEACE ENTERPRISES
83100 42490, 99013 18277
98801 56667

**ಮನೆಗಳು ಬಾಡಿಗೆಗೆ ಇವೆ**
ರಿಯಲ್ ಎಸ್ಟೇಟ್ ಏಜೆಂಟ್
1 BHK ವಿವೇಕಾನಂದ ಬಡಾವಣೆ, 2 BHK ಆಂಜನೇಯ ಬಡಾವಣೆ, 2BHK ಶಿವಕುಮಾರ ಸ್ವಾಮಿ ಬಡಾವಣೆ, 3 BHK ಆಂಜನೇಯ ಬಡಾವಣೆ, 5 BHK ಜಯನಗರ (ಜೈ ನಗರ)
78927 93994

**ಮಾರಾಟಕ್ಕೆ**
ಶಿವಪ್ಪ ಸರ್ಕಲ್ ಹತ್ತಿರ (ಶೆಟ್ರು ಜೀನ್) ಸೈಟ್(ಪಶ್ಚಿಮ)18×42, 35×42, ಕುವೆಂಪು ನಗರ ಸೈಟ್(ಪಶ್ಚಿಮ)24×50, ಸ್ವಾಮಿ ವಿವೇಕಾನಂದ ಬಡಾವಣೆ ಸೈಟು(ಪಶ್ಚಿಮ)30×60, ಬನಶಂಕರಿ ಬಡಾವಣೆ ಸೈಟ್(ಪೂರ್ವ)30×50 ಅಂಬಿಕ ನಗರ ಸೈಟ್ (ಪಶ್ಚಿಮ)30×50, ಹನುಮಂತಪ್ಪ ಲೇಔಟ್ ಸೈಟುಗಳು ( ರಶ್ಮಿ ಹಾಸ್ಟೆಲ್) 30×40
78996 36597,99165 25828

**ಪ್ರಥಮ ವರ್ಷದ ಪುಣ್ಯಸ್ಮರಣೆ**



ಶ್ರೀಮತಿ
ನಾಗರತ್ನಮ್ಮ ಬಿ.ಎಸ್.
ನಿಧನ : 23.04.2020
ನೀವು ನಮ್ಮನ್ನಗಲಿ ಇಂದಿಗೆ ಒಂದು ವರ್ಷವಾಯಿತು.
ಸದಾ ನಿಮ್ಮ ಪ್ರೀತಿ, ನೆನಪು ಹಾಗೂ ಸ್ಮರಣೆಯಲ್ಲಿರುವ
ಅಣ್ಣ, ತಮ್ಮ, ಅಕ್ಕಂದಿರು, ತಂಗಿಯಂದಿರು, ಅಳಿಯಂದಿರು ಮತ್ತು ಬಂಧು-ಮಿತ್ರರು ಹಾಗೂ ಬಾಬಣ್ಣನವರ ವಂಶಸ್ಥರು, ದಾವಣಗೆರೆ.

**ನೆಲಮಹಡಿ ಮನೆ ಬಾಡಿಗೆ**
ಗ್ರೌಂಡ್ ಫ್ಲೋರ್ ಪೂರ್ವ ಮುಂಬಾಗಿಲಿನ ಹಾಲ್, ಡೈನಿಂಗ್ ಹಾಲ್, 2/3 ಬೆಡ್ ರೂಂ, ವಾರ್ಡ್‌ರೋಬೋಸ್, ಇಂಡಿಯನ್ & ವೆಸ್ಟರ್ನ್ ಟಾಯ್ಲೆಟ್, ಪಾರ್ಕಿಂಗ್ & ನೀರಿನ ಸೌಕರ್ಯ ಇದೆ.
Near vishveshwaraiah Park, P.J. extension.
93807 97651
80888 61845

**Room for Ladies P G**
Attached bath room, 24 hours hot water, Rs. 1500/- per month.
9844061464

ಶ್ರೀ ಗುರು ಮರುಳಸಿದ್ದೇಶ್ವರ ಸ್ವಾಮಿ ಸೇವಾ ಸಂಸ್ಥೆ (ರಿ.)
**ಹಿಂದೂ ವಧು-ವರರ ಮಾಹಿತಿ ಕೇಂದ್ರ,**
www.hindusmatrimony.com
ನಮ್ಮಲ್ಲಿ ಎಲ್ಲಾ ತರಹದ ಹಿಂದೂ ವಧು-ವರರಿಗಾಗಿ ಸಂಪರ್ಕಿಸಿ.
ವಿಳಾಸ : ಬಾಣಾಪುರಮಠ ಹಾಸ್ಪಿಟಲ್ ಎದುರು, 8ನೇ ಮೇನ್, ಪಿ.ಜೆ. ಬಡಾವಣೆ, ದಾವಣಗೆರೆ-2.
94481-59303, 94834 63783

**ಭದ್ರಾ ನ್ಯಾಚರಲ್**
ದಾವಣಗೆರೆ ರಾಂ ಅಂಡ್ ಕೋ ಸರ್ಕಲ್ ಮೆಡ್ ಪ್ಲೆಸ್ ಎದುರಿಗಿರುವ ಭದ್ರಾ ನ್ಯಾಚುರಲ್ಸ್ (ಸಾವಯವ/ ನೈಸರ್ಗಿಕ ಆಹಾರ ದಿನಸಿ ಒಂದೇ ಸೂರಿನಡಿ) ವ್ಯವಹಾರದ ಸಮಯ ಬೆಳಗ್ಗೆ 10 ರಿಂದ ರಾತ್ರಿ 9ರ ವರೆಗೆ ಶನಿವಾರ ಮತ್ತು ಭಾನುವಾರ ಬೆಳಗ್ಗೆ 6 ರಿಂದ 10ರವರೆಗೆ. ಮೆಳ್ಳೇಕಟ್ಟೆ ಬಸವರಾಜಪ್ಪ
94483 23796, 91646 76826

**ಮಾಸ್ಕ್ ಬಳಸಿ ಕೊರೊನಾ ತೊಲಗಿಸಿ**

# ಭೂ ಸ್ವಾಧೀನ ಪ್ರಕ್ರಿಯೆ ತ್ವರಿತಗೊಳಿಸಿ : ಸಿದ್ದೇಶ್ವರ

(1ನೇ ಪುಟದಿಂದ) ಭೂ ಸ್ವಾಧೀನ ಪ್ರಕ್ರಿಯೆಯಲ್ಲಿ ಯಾವುದೇ ಅಡೆತಡೆಗಳಿದ್ದಲ್ಲಿ ಜಿಲ್ಲಾಧಿಕಾರಿಗಳ ಗಮನಕ್ಕೆ ತಂದು ಸಮಸ್ಯೆ ಪರಿಹರಿಸಿಕೊಳ್ಳಬೇಕು ಎಂದು ಹೇಳಿದರು.

ಸಾಸ್ವೆಹಳ್ಳಿ ಏತ ನೀರಾವರಿ ಯೋಜನೆಗಾಗಿ ಹೊನ್ನಾಳಿ ತಾಲ್ಲೂಕಿನಲ್ಲಿ 6 ಎಕರೆ 3 ಗುಂಟೆ ಹಾಗೂ ಚನ್ನಗಿರಿ ತಾಲ್ಲೂಕಿನಲ್ಲಿ 9 ಎಕರೆ 14 ಗುಂಟೆ ಸೇರಿದಂತೆ 15 ಎಕರೆ 17 ಗುಂಟೆ ಭೂ ಸ್ವಾಧೀನ ಮಾಡಿಕೊಳ್ಳಲಾಗುತ್ತದೆ. ಈಗಾಗಲೇ ಸಾಸ್ವೆಹಳ್ಳಿ ಗ್ರಾಮದಲ್ಲಿ 3 ಎಕರೆ 3 ಗುಂಟೆಗೆ ಸಂಬಂಧಿಸಿದಂತೆ ಭೂಮಿ ಕಳೆದುಕೊಳ್ಳುವ ರೈತರಿಗೆ ಕಳೆದ ವರ್ಷ ಮೇ ತಿಂಗಳಿನಲ್ಲಿ ಶೇ. 50 ರಷ್ಟು ಪರಿಹಾರ ಹಣ ಪಾವತಿಸಲಾಗಿದೆ.

ಅದೇ ರೀತಿ ಚನ್ನಗಿರಿ ತಾಲ್ಲೂಕು ಚಕ್ಕಲಿ ಗ್ರಾಮದ ಬಳಿ ಪಂಪ್‌ಹೌಸ್, ಎಲೆಕ್ಟ್ರಿಕಲ್ ಸಬ್‌ಸ್ಟೇಷನ್, ಅಪ್ರೋಚ್ ರಸ್ತೆಗೆ ಅಗತ್ಯವಿರುವ ಒಟ್ಟು 7 ಎಕರೆ ಭೂಮಿಗೆ ಸಂಬಂಧಿಸಿದಂತೆ ಕಳೆದ ವರ್ಷ ಮೇ ತಿಂಗಳಿನಲ್ಲಿ ಶೇ. 50 ರಷ್ಟು ಪರಿಹಾರ ಹಣ ಪಾವತಿಸಲಾಗಿದೆ. ಚಿತ್ರದುರ್ಗ ಜಿಲ್ಲೆ ಹೊಳಲ್ಕೆರೆ ತಾಲ್ಲೂಕಿನ ಮುತ್ತುಗದೂರು ಬಳಿ ಪಂಪ್‌ಹೌಸ್ ಹಾಗೂ ವಿದ್ಯುತ್ ಸಬ್‌ಸ್ಟೇಷನ್, ಚಿತ್ರದುರ್ಗ ತಾಲ್ಲೂಕು ಮದಕರಿ ಪುರ ಮತ್ತು ದೊಡ್ಡಿಗನಾಳ್ ಗ್ರಾಮಗಳ ಬಳಿ ಡೆಲಿವರಿ ಚೇಂಬರ್, ಅಪ್ರೋಚ್ ರಸ್ತೆಗಾಗಿ ಸದ್ಯ ಭೂಸ್ವಾಧೀನ ಪ್ರಕ್ರಿಯೆಯನ್ನು ತ್ವರಿತವಾಗಿ ಪೂರ್ಣಗೊಳಿಸಿ ನಿಗಮಕ್ಕೆ ಹಸ್ತಾಂತರ ಮಾಡುವ ಕಾರ್ಯ ಬಾಕಿ ಇದೆ. ಭೂ ಸ್ವಾಧೀನ ಕಾರ್ಯವನ್ನು ವಿಳಂಬಕ್ಕೆ ಅವಕಾಶವಿಲ್ಲದಂತೆ ಶೀಘ್ರ ಪೂರ್ಣಗೊಳಿಸಬೇಕು ಎಂದರು.

ಹೊನ್ನಾಳಿ ತಾಲ್ಲೂಕಿನಲ್ಲಿ ಪಂಪ್‌ಹೌಸ್-1 ರ ಬಳಿ ನಿರ್ಮಿಸಲು ಉದ್ದೇಶಿಸಿರುವ ಎಲೆಕ್ಟ್ರಿಕಲ್ ಸಬ್‌ಸ್ಟೇಷನ್‌ಗೆ ವಿದ್ಯುತ್ ಸಂಪರ್ಕಕ್ಕಾಗಿ 49 ವಿದ್ಯುತ್ ಟವರ್‌ಗಳನ್ನು ನಿರ್ಮಿಸಬೇಕಿದ್ದು, 48 ಎಕರೆ ಭೂಮಿಯನ್ನು ಗುರುತಿಸಲಾಗಿದೆ. ಇದಕ್ಕಾಗಿ ರೈತರ ಭೂಮಿ ಸರ್ವೆ ಕಾರ್ಯ ಪೂರ್ಣಗೊಂಡಿದ್ದು, ಪರಿಹಾರ ಮೊತ್ತ ನಿಗದಿಪಡಿಸುವುದು ಬಾಕಿ ಇದೆ. ಹೊಳಲ್ಕೆರೆ ತಾಲ್ಲೂಕು ಸಾಸಲು ಗ್ರಾಮದ ಬಳಿಯ ಸಬ್‌ಸ್ಟೇಷನ್‌ಗೆ 20 ಟವರ್‌ಗಳ ನಿರ್ಮಾಣಕ್ಕೆ ಸರ್ವೆ ಪೂರ್ಣಗೊಂಡಿದೆ ಎಂದರು.

ಕೆರೆಬಿಳಚಿ ಗ್ರಾಮದ ಬಳಿ ವಿದ್ಯುತ್ ಸಬ್‌ಸ್ಟೇಷನ್‌ಗೆ ವಿದ್ಯುತ್ ಸಂಪರ್ಕಿಸಲು 4.50 ಕಿ.ಮೀ. ಮಾರ್ಗದಲ್ಲಿ 20 ವಿದ್ಯುತ್ ಟವರ್ ನಿರ್ಮಾಣಕ್ಕೆ ಜಕ್ಕಲಿ, ಸೋಮಲಾಪುರ, ಕೆರೆಬಿಳಚಿ ಗ್ರಾಮಗಳ ಸರ್ವೇ ಕಾರ್ಯವನ್ನು ಚನ್ನಗಿರಿ ತಹಸೀಲ್ದಾರರು ತ್ವರಿತವಾಗಿ ಮಾಡಿಸಬೇಕು ಎಂದು ಅಧಿಕಾರಿಗಳು ಸಭೆಯ ಗಮನಕ್ಕೆ ತಂದರು. ಇದಕ್ಕೆ ಪ್ರತಿಕ್ರಿಯಿಸಿದ ಜಿಲ್ಲಾಧಿಕಾರಿಗಳು, ಬಾಕಿ ಇರುವ ಸರ್ವೇ ಕಾರ್ಯವನ್ನು ಆಯಾ ತಹಸೀಲ್ದಾರರು ಪೂರ್ಣಗೊಳಿಸಬೇಕು. ಪರಿಹಾರ ಮೊತ್ತದ ದರವನ್ನು ಒಂದು ವಾರದೊಳಗೆ ನಿಗದಿಪಡಿಸಲಾಗುವುದು ಎಂದು ಭರವಸೆ ನೀಡಿದರು.

ರಾಜನಹಳ್ಳಿ ಏತ ನೀರಾವರಿ ಯೋಜನೆಯಲ್ಲಿ ಮೊದಲನೆ ಹಂತದಲ್ಲಿ ಹರಿಹರ ತಾಲ್ಲೂಕಿನ ಹಲಸಬಾಳು ಗ್ರಾಮದ ಬಳಿ ತುಂಗಭದ್ರಾ ನದಿಯಿಂದ ನೀರೆತ್ತಿ 28 ಕಿ.ಮೀ. ದೂರದಲ್ಲಿರುವ ದಾವಣಗೆರೆ ತಾಲ್ಲೂಕಿನ ಮಲ್ಲಶೆಟ್ಟಿಹಳ್ಳಿ ಗ್ರಾಮದ ಹತ್ತಿರದ ಎರಡನೇ ಹಂತಕ್ಕೆ ನೀರೊದಗಿಸುವುದು. ಎರಡನೇ ಹಂತದಲ್ಲಿ ಉದ್ದೇಶಿತ 22 ಕೆರೆಗಳಿಗೆ 150 ಕಿ.ಮೀ. ಪೈಪ್‌ಲೈನ್ ಮುಖಾಂತರ ನೀರೊದಗಿಸುವ ಯೋಜನೆ ಇದಾಗಿದೆ. ಯೋಜನೆಯಡಿ ಸದ್ಯ 2022 ರ ಜುಲೈ 31 ರವರೆಗೆ ನಿರ್ವಹಣೆ ಗುತ್ತಿಗೆಯನ್ನು ನೀಡಲಾಗಿದೆ ಎಂದು ಯೋಜನೆಯ ಕಾರ್ಯಪಾಲಕ ಅಭಿಯಂತರ ಮಲ್ಲಪ್ಪ ಹೇಳಿದರು.

ಹಲಸಬಾಳು ಪಂಪ್‌ಹೌಸ್‌ಗೆ ಸಂಪರ್ಕಿಸುವ 225 ಮೀ. ಉದ್ದ ಹಾಗೂ ಮಲ್ಲಶೆಟ್ಟಿಹಳ್ಳಿ ಬಳಿಯ 50 ಮೀ. ಉದ್ದದ ಇಂಟೇಕ್ ಚಾನಲ್‌ನ ಹೂಳನ್ನು ತೆಗೆಸಲು ಸೂಚನೆ ನೀಡಲಾಗಿದ್ದು, ಸದ್ಯ ಇಂಟೇಕ್ ಚಾನಲ್‌ನಲ್ಲಿ ನೀರು ಖಾಲಿಯಿದ್ದು, ಮಳೆಗಾಲ ಪ್ರಾರಂಭವಾಗುವುದರ ಒಳಗಾಗಿ ಹೂಳು ತೆಗೆಸಬೇಕು ಎಂದು ಸಂಸದರು ಸೂಚನೆ ನೀಡಿದರು.

ಏತ ನೀರಾವರಿ ಯೋಜನೆಯ ರಾಷ್ಟ್ರೀಯ ಹೆದ್ದಾರಿ 4ರ ಪಕ್ಕದಲ್ಲಿರುವ ಪೈಪ್‌ಲೈನನ್ನು ಸ್ಥಳಾಂತರಿಸುವ ಕಾಮಗಾರಿ ತ್ವರಿತವಾಗಿ ಕೈಗೊಳ್ಳದಿರುವುದಕ್ಕೆ ತೀವ್ರ ಅಸಮಾಧಾನ ವ್ಯಕ್ತಪಡಿಸಿದ ಸಂಸದರು, ಸಂಬಂಧಪಟ್ಟ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ ಹಾಗೂ ಏತ ನೀರಾವರಿ ಯೋಜನೆಯ ಅಧಿಕಾರಿಗಳಿಗೆ ಎಚ್ಚರಿಕೆ ನೀಡಿ, ಪೈಪ್‌ಲೈನ್ ಸ್ಥಳಾಂತರಿಸುವ ಕಾರ್ಯ ಶೀಘ್ರ ಪೂರ್ಣಗೊಳ್ಳಬೇಕು ಎಂದರು. ಉತ್ತರಿಸಿದ ರಾ.ಹೆ. ಪ್ರಾಧಿಕಾರದ ಅಧಿಕಾರಿಗಳು ಈಗಾಗಲೇ 12 ಕಿ.ಮೀ. ಪೈಕಿ 7.5 ಕಿ.ಮೀ. ಪೈಪ್‌ಲೈನ್ ಸ್ಥಳಾಂತರ ಪೂರ್ಣಗೊಂಡಿದ್ದು, ಇನ್ನೂ 4.5 ಕಿ.ಮೀ. ಕಾಮಗಾರಿ ಬಾಕಿ ಇದೆ. ಭೂಮಿ ಹಸ್ತಾಂತರ ಪ್ರಕ್ರಿಯೆಯಲ್ಲಿ ಸಮಸ್ಯೆಯಿದ್ದು, ವಿಳಂಬವಾಗುತ್ತಿದೆ ಎಂದರು. ಜಿಲ್ಲಾಧಿಕಾರಿಗಳು ಪ್ರತಿಕ್ರಿಯಿಸಿ, ಭೂಮಿ ಸ್ವಾಧೀನಕ್ಕೆ ಪಡೆದು, ಪೊಲೀಸ್ ಬಂದೋಬಸ್ತ್ ತೆಗೆದುಕೊಂಡು ಕಾಮಗಾರಿ ಶೀಘ್ರ ಪೂರ್ಣಗೊಳಿಸುವಂತೆ ಸೂಚನೆ ನೀಡಿದರು.

ಸಭೆಯಲ್ಲಿ ಮಾಯಕೊಂಡ ಕ್ಷೇತ್ರದ ಶಾಸಕ ಪ್ರೊ. ಲಿಂಗಣ್ಣ, ಕರ್ನಾಟಕ ನೀರಾವರಿ ನಿಗಮ ತುಂಗಾ ಮೇಲ್ದಂಡೆ ಯೋಜನಾ ವಲಯದ ಮುಖ್ಯ ಇಂಜಿನಿಯರ್ ಯತೀಶ್‌ಚಂದ್ರ, ಉಪವಿಭಾಗಾಧಿ ಕಾರಿ ಮಮತಾ ಹೊಸಗೌಡರ್ ಸೇರಿದಂತೆ ಬೆಸ್ಕಾಂ, ಕೆಪಿಟಿಸಿಎಲ್, ಲೋಕೋಪಯೋಗಿ ಇಲಾಖೆಗಳ ಇಂಜಿನಿಯರ್‌ಗಳು, ತಹಸೀಲ್ದಾರರು ಉಪಸ್ಥಿತರಿದ್ದರು.

### ಕೆಳ ಸೇತುವೆಗಳ ಬಳಿ ನೀರು ನಿಲ್ಲದಂತೆ ಕ್ರಮ ವಹಿಸಿ

**ದಾವಣಗೆರೆಯಿಂದ ಹಾವೇರಿವರೆಗಿನ ರಾಷ್ಟ್ರೀಯ ಹೆದ್ದಾರಿಯಲ್ಲಿ ಬರುವ ಫ್ಲೈಓವರ್‌ಗಳ ಬಳಿ ಹಾಗೂ ಕೆಳ ಸೇತುವೆ ಬಳಿ ಮಳೆ ನೀರು ರಸ್ತೆಯ ಮೇಲೆಯೇ ನಿಲ್ಲುತ್ತಿದ್ದು, ವಾಹನಗಳ ಅಪಘಾತಕ್ಕೆ ಕಾರಣವಾಗುವ ಎಲ್ಲ ಸಾಧ್ಯತೆಗಳಿವೆ. ತಾವೇ ಖುದ್ದಾಗಿ ಇದರ ಅನುಭವ ಪಡೆದಿದ್ದೇನೆ. ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದ ಅಧಿಕಾರಿಗಳು ಇಂತಹ ಪ್ರದೇಶಗಳನ್ನು ಗುರುತಿಸಿ, ಸೂಕ್ತ ಕ್ರಮ ವಹಿಸಬೇಕು. ಯಾವುದೇ ಕಾರಣಕ್ಕೂ ರಾಷ್ಟ್ರೀಯ ಹೆದ್ದಾರಿಯಲ್ಲಿ ಮಳೆ ನೀರು ನಿಲ್ಲುವಂತಿರಬಾರದು ಎಂದು ಸಂಸದ ಸಿದ್ದೇಶ್ವರ್ ತಾಕೀತು ಮಾಡಿದರು.**

## ಕ್ಷಣಾರ್ಧದಲ್ಲೇ ದ್ವಿಚಕ್ರ ವಾಹನದಲ್ಲಿದ್ದ 5 ಲಕ್ಷ ಕಳವು

ದಾವಣಗೆರೆ, ಏ.22- ಬೇಕರಿಗೆ ಹೋಗಿ ಬರುವಷ್ಟರಲ್ಲಿ ದ್ವಿಚಕ್ರ ವಾಹನದ ಡಿಕ್ಕಿಯಲ್ಲಿದ್ದ ಐದು ಲಕ್ಷ ನಗದನ್ನು ಹಾಡಹಗಲೇ ಕ್ಷಣಾರ್ಧದಲ್ಲಿ ದೋಚಿರುವ ಬಗ್ಗೆ ಇಲ್ಲಿನ ಕೆಟಿಜೆ ನಗರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ನಿಟ್ಟುವಳ್ಳಿ ಹೊಸ ಬಡಾವಣೆ 8ನೇ ಕ್ರಾಸ್ ನ ಡಿ. ಸದಾಶಿವ ಎಂಬಾತ ಬುಧವಾರ ಮಧ್ಯಾಹ್ನ ತಮ್ಮ ಖಾತೆಯುಳ್ಳ ಬ್ಯಾಂಕಿನಿಂದ 5 ಲಕ್ಷ ಡ್ರಾ ಮಾಡಿಕೊಂಡು ಅದನ್ನುತಮ್ಮದ್ವಿ ಚಕ್ರ ವಾಹನದ ಡಿಕ್ಕಿಯಲ್ಲಿಟ್ಟುಕೊಂಡು ಮನೆಗೆ ಸಾಗುತ್ತಿದ್ದರು. ಆಗ ಹೆಚ್.ಕೆ.ಆರ್ ವೃತ್ತದ ಬಳಿ ಬೇಕರಿಯೊಂದರ ಮುಂಭಾಗ ದ್ವಿಚಕ್ರ ವಾಹನ ನಿಲ್ಲಿಸಿ ಐಸ್ ಕ್ರೀಂ ತೆಗೆದುಕೊಂಡು ವಾಪಸ್ ಬಂದು ದ್ವಿಚಕ್ರ ವಾಹನದಲ್ಲಿ ಮನೆಯ ಬಳಿ ಹೋಗಿ ಡಿಕ್ಕಿಯಲ್ಲಿಟ್ಟ ಹಣವನ್ನು ನೋಡಿದಾಗ ಕಳುವಾಗಿರುವುದು ಬೆಳಕಿಗೆ ಬಂದಿದೆ ಎಂದು ದೂರಿನಲ್ಲಿ ತಿಳಿಸಲಾಗಿದೆ.

## 1,500 ಮೆಟ್ರಿಕ್ ಟನ್ ಆಕ್ಸಿಜನ್‌ಗಾಗಿ ಬೇಡಿಕೆ

(1ನೇ ಪುಟದಿಂದ) ರೆಮ್ಡಿಸಿವಿರ್ ಪೂರೈಸಬೇಕು ಎಂದು ಕೇಂದ್ರ ಸರ್ಕಾರಕ್ಕೆ ಕರ್ನಾಟಕ ಮನವಿ ಮಾಡಿಕೊಂಡಿದೆ.

ಮುಂದಿನ 1 ತಿಂಗಳಲ್ಲಿ ನಮಗೆ 1,500 ಮೆಟ್ರಿಕ್ ಟನ್ ಆಕ್ಸಿಜನ್ ಬೇಕಾಗಬಹುದು. ಈ ಹಿನ್ನೆಲೆಯಲ್ಲಿ ಕೇಂದ್ರ ರೈಲ್ವೆ, ವಾಣಿಜ್ಯ ಹಾಗೂ ಸಚಿವ ಪಿಯೂಶ್ ಗೋಯಲ್ ಅವರಿಗೆ ಮುಖ್ಯಮಂತ್ರಿ ಯಡಿಯೂರಪ್ಪ ಪತ್ರ ಬರೆದಿದ್ದಾರೆ ಎಂದು ಆರೋಗ್ಯ ಸಚಿವ ಡಾ. ಕೆ. ಸುಧಾಕರ್ ತಿಳಿಸಿದ್ದಾರೆ.

ಆಕ್ಸಿಜನ್‌ಗಾಗಿ ಕೇಂದ್ರ ಆರೋಗ್ಯ ಸಚಿವ ಡಾ. ಹರ್ಷ ವರ್ಧನ್ ಅವರಿಗೂ ಮುಖ್ಯಮಂತ್ರಿ ಪತ್ರ ಬರೆದಿದ್ದಾರೆ. ಇದರ ಜೊತೆಗೆ ರಾಜ್ಯದ ಪ್ರಮುಖ ಆಕ್ಸಿಜನ್ ಉತ್ಪಾದಕರ ಜೊತೆ ಸಭೆಗಳನ್ನು ನಡೆಸಲಾಗಿದೆ ಎಂದವರು ಹೇಳಿದ್ದಾರೆ.

ರಾಜ್ಯದ ಆಕ್ಸಿಜನ್ ಉತ್ಪಾದಕರಲ್ಲಿ ಜೆ.ಎಸ್.ಡಬ್ಲ್ಯೂ. ಸ್ಟೀಲ್ ಅತಿ ದೊಡ್ಡ ಉತ್ಪಾದಕ ಕಂಪನಿಯಾಗಿದೆ. ನಾವು ಕಂಪನಿಯ ಸಜ್ಜನ್ ಜಿಂದಾಲ್ ಜೊತೆ ಮಾತನಾಡಿದ್ದೇವೆ. ರಾಜ್ಯಕ್ಕೆ ಅಗತ್ಯವಿರುವಷ್ಟು ಆಕ್ಸಿಜನ್ ಪೂರೈಸುವುದಾಗಿ ಅವರು ತಿಳಿಸಿದ್ದಾರೆ ಎಂದು ಸುಧಾಕರ್ ಹೇಳಿದ್ದಾರೆ.

ಕಳೆದ 2 ದಿನಗಳಲ್ಲಿ ಬೆಂಗಳೂರಿಗೆ ಅಗತ್ಯವಾದ 40 ಮೆಟ್ರಿಕ್ ಟನ್ ಆಕ್ಸಿಜನ್ ಅನ್ನು ಪೂರೈಕೆ ಮಾಡಿದೆ ಎಂದಿದ್ದಾರೆ.

## 25,795 ಸೋಂಕಿತರು ಪತ್ತೆ

(1ನೇ ಪುಟದಿಂದ) ಬಿಡುಗಡೆಯಾಗಿದ್ದಾರೆ. ರಾಜ್ಯದಲ್ಲೀಗ 1.96 ಲಕ್ಷ ಸಕ್ರಿಯ ಸೋಂಕಿತರಿದ್ದು, 243 ಸೋಂಕಿತರು ಐ.ಸಿ.ಯುನಲ್ಲಿದ್ದಾರೆ. ಕೊರೊನಾ ಪಾಸಿಟಿವ್ ಪ್ರಮಾಣ ಗುರುವಾರದಂದು ಶೇ.15.87ಹಾಗೂ ಸಾವಿನ ಪ್ರಮಾಣ ಶೇ.0.47ರಷ್ಟಿತ್ತು.

## ರಾತ್ರಿ 9ಕ್ಕೆ ನಿಶ್ಯಬ್ಧಗೊಂಡ ಹೊನ್ನಾಳಿ



ಹೊನ್ನಾಳಿ, ಏ. 22- ಸಂತೆ ದಿನವಾದ ಹೊನ್ನಾಳಿಯಲ್ಲಿ ಬುಧವಾರ ಕೊರೊನಾ ಮಹಾಮಾರಿ ನಿಯಂತ್ರಿಸುವ ನಿಟ್ಟಿನಲ್ಲಿ ತಾಲ್ಲೂಕು ಆಡಳಿತವು ರಾತ್ರಿ 9 ಕ್ಕೆ ಬಸ್ ಸ್ಟ್ಯಾಂಡ್ ಸೇರಿದಂತೆ, ಪಟ್ಟಣದ ಎಲ್ಲಾ ರಸ್ತೆಗಳ ಅಂಗಡಿಗಳನ್ನು ಬಂದ್ ಮಾಡಿಸಿತು. ತಹಶೀಲ್ದಾರ್ ಬಸವನಗೌಡ ಕೊಟ್ಟೂರು ಮಾತನಾಡಿ, ಪ್ರತಿದಿನ ಬೆಳಗ್ಗೆ 6 ರಿಂದ ರಾತ್ರಿ 9 ಗಂಟೆ ಒಳಗೆ ವ್ಯಾಪಾರ, ವಹಿವಾಟು ನಡೆಯಲಿದ್ದು, ಶನಿವಾರ ಮತ್ತು ಭಾನುವಾರ ಮಾತ್ರ ಬೆಳಗ್ಗೆ 6 ರಿಂದ 10 ಗಂಟೆಯ ವರೆಗೆ ನಾಲ್ಕು ತಾಸುಗಳು ಮಾತ್ರ ವ್ಯಾಪಾರ ವಹಿವಾಟಿಗೆ ಅವಕಾಶವಿದೆ. ಸಾಧ್ಯವಾದರೆ ತರಕಾರಿ ವಹಿವಾಟನ್ನು ಪಟ್ಟಣದ ಎರಡು ಕಡೆ ವ್ಯವಸ್ಥೆ ಮಾಡಲಾಗುವುದೆಂದರು.

ಎಸ್ಐ ಬಸವಗೌಡ ಬಿರಾದಾರ್, ಪಂಚಾಯ್ತಿ ಮುಖ್ಯಾಧಿಕಾರಿಗಳು ಹಾಗೂ ಸಿಬ್ಬಂದಿಗಳು ಉಪಸ್ಥಿತರಿದ್ದರು. 9 ಗಂಟೆಯ ನಂತರ ಜನರ ಸಂಚಾರವಿಲ್ಲದೇ ಬಿಕೋ ಎನ್ನುತ್ತಿದ್ದವು.

## ಪೌರ ಕಾರ್ಮಿಕರ ನಿಯೋಜನೆಗೆ ಒತ್ತಾಯ

ದಾವಣಗೆರೆ, ಏ.22- ಮಹಾನಗರ ಪಾಲಿಕೆ ವ್ಯಾಪ್ತಿಯ 1 ಮತ್ತು 6ನೇ ವಾರ್ಡ್‌ಗಳಿಗೆ ಹೆಚ್ಚುವರಿ ಪೌರ ಕಾರ್ಮಿಕರನ್ನು ನಿಯೋಜಿಸಲು ಜಿಲ್ಲಾ ಜಾತ್ಯತೀತ ಜನತಾದಳ ಪರಿಶಿಷ್ಟ ವಿಭಾಗದ ಅಧ್ಯಕ್ಷ ಸಿ. ಅಂಜಿನಪ್ಪ ಕಡತಿ ಪಾಲಿಕೆ ಆಯುಕ್ತರನ್ನು ಒತ್ತಾಯಿಸಿದ್ದಾರೆ.

ಪರಿಶಿಷ್ಟ ಜಾತಿಯ ಜನರೇ ಹೆಚ್ಚು ವಾಸಿಸುವ 1ನೇ ವಾರ್ಡ್ ಹಾಗೂ 6ನೇ ವಾರ್ಡ್‌ನಲ್ಲಿ ಕೇವಲ 3 ಜನ ಪೌರಕಾರ್ಮಿಕರು ಕೆಲಸ ಮಾಡುತ್ತಿದ್ದಾರೆ. ಕೂಡಲೇ 10 ರಿಂದ 12 ಜನ ಖಾಯಂ ನೌಕರರನ್ನು ನೇಮಕ ಮಾಡುವಂತೆ ಆಗ್ರಹಿಸಿದ್ದಾರೆ.

# ಮಾಸ್ಕ್ ಧರಿಸದವರಿಗೆ ಅಧಿಕಾರಿಗಳಿಂದ ತರಾಟೆ, ದಂಡ

ಹರಿಹರ, ಏ.22- ಕೋವಿಡ್ ರೋಗವು ದಿನದಿಂದ ದಿನಕ್ಕೆ ಹೆಚ್ಚಿನ ಪ್ರಮಾಣದಲ್ಲಿ ಹರಡುತ್ತಿದ್ದು, ನಗರಸಭೆ ಪೌರಾಯುಕ್ತೆ ಎಸ್. ಲಕ್ಷ್ಮಿ ಮತ್ತು ಸಿಪಿಐ ಸತೀಶ್ ಕುಮಾರ್ ಅವರು ನಗರದಲ್ಲಿಂದು ಸುಡುವ ಬಿಸಿಲನ್ನೂ ಲೆಕ್ಕಿಸದೆ ಜನನಿಬಿಡ ಪ್ರದೇಶವಾದ ತರಕಾರಿ ಮಾರುಕಟ್ಟೆ, ಹೋಟೆಲ್, ಡಾಬಾ, ಬಾರ್, ಮಾಲ್, ಲಾಡ್ಜ್, ಸೇರಿದಂತೆ ವಿವಿಧೆಡೆಯಲ್ಲಿ ಮಾಸ್ಕ್ ಧರಿಸದೆ ಇರುವವರಿಗೆ ತರಾಟೆಗೆ ತೆಗೆದುಕೊಳ್ಳುವುದರ ಜೊತೆಗೆ ಅವರಿಗೆ ಲಾಟಿ ರುಚಿ ತೋರಿಸಿ, ದಂಡ ಹಾಕಿದರು.



ನಗರದ ಹಳೇ ಪಿಬಿ ರಸ್ತೆ, ಮುಖ್ಯ ರಸ್ತೆ, ದೇವಸ್ಥಾನ ರಸ್ತೆ, ಹೆಚ್. ಶಿವಪ್ಪ ವೃತ್ತ, ರಾಣಿ ಚೆನ್ನಮ್ಮ ವೃತ್ತದಲ್ಲಿ ವ್ಯಾಪಾರ, ವಹಿವಾಟು ಮಾಡುತ್ತಿರುವ ಸ್ಥಳಕ್ಕೆ ಭೇಟಿ ನೀಡಿದ ಅಧಿಕಾರಿಗಳು ಹಾಗೂ ಸಿಬ್ಬಂದಿಗಳು ಮಾಸ್ಕ್ ಧರಿಸದೆ ಓಡಾಡುವ ಸಾರ್ವಜನಿಕರಿಗೆ, ವಾಹನ ಮಾಲೀಕರಿಗೆ, ಅಂಗಡಿಯಲ್ಲಿ ಕರ್ತವ್ಯವನ್ನು ಮಾಡುತ್ತಿರುವ ಕೆಲಸಗಾರರಿಗೆ ಚಳಿ ಬಿಡಿಸಿದರು.

ಸಿಪಿಐ ಸತೀಶ್ ಕುಮಾರ್ ಮಾತನಾಡಿ, ಸಾರ್ವಜನಿಕರಿಗೆ ಕೋವಿಡ್ ಬಗ್ಗೆ ನಿರ್ಲಕ್ಷ್ಯ ಭಾವನೆ ಬಂದಿದ್ದು, ಅದನ್ನು ಮನಸ್ಸಿನಿಂದ ತೆಗೆದು ಹಾಕಬೇಕು. ಈಗಾಗಲೇ ಸರ್ಕಾರ ವಿವಿಧ ರೀತಿಯ ಜಾಗೃತಿ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದೆ. ಇದನ್ನು ಸದುಪಯೋಗ ಪಡಿಸಿಕೊಂಡು ಆರೋಗ್ಯವಂತ ಜೀವನವನ್ನು ನಡೆಸಬೇಕು. ಬೇಸರದ ವಿಷಯ ವೆಂದರೆ ನಾವುಗಳು ರಸ್ತೆಗೆ ಇಳಿದು ಜನರಿಗೆ ಅರಿವು ಮೂಡಿಸುವಂತಹ ಕಾರ್ಯಕ್ಕೆ ಮುಂದಾಗ ಬೇಕಾಗಿದೆ. ಸಾರ್ವಜನಿಕರು ಕಡ್ಡಾಯವಾಗಿ ಸಾಮಾಜಿಕ ಅಂತರವನ್ನು ಕಾಯ್ದುಕೊಂಡು ಮಾಸ್ಕ್ ಧರಿಸಿ ಎಂದು ಹೇಳಿದರು.

ನಗರದ ಹೋಟೆಲ್, ಡಾಬಾದವರಿಗೆ ಪಾರ್ಸಲ್ ಮಾತ್ರ ಕೊಡುವಂತೆ ಸೂಚಿಸಲಾಗಿದೆ. ಕಾನೂನು ಉಲ್ಲಂಘನೆ ಮಾಡುವವರ ವಿರುದ್ಧ ಸರ್ಕಾರದ ಮಾರ್ಗಸೂಚಿ ಅನ್ವಯ ಕಠಿಣ ಕ್ರಮಗಳನ್ನು ಕೈಗೊಳ್ಳಲಾಗುತ್ತದೆ ಎಂದು ಹೇಳಿದರು.

ನಗರಸಭೆ ಪೌರಾಯುಕ್ತೆ ಎಸ್. ಲಕ್ಷ್ಮಿ ಮಾತನಾಡಿ ನಗರದಲ್ಲಿ ಕಸ ಸಾಗಿಸುವ ವಾಹನಗಳ ಮೂಲಕ ಸಾರ್ವಜನಿಕರಿಗೆ ಕೊರೊನಾ ರೋಗದ ಅರಿವು ಮೂಡಿಸಲಾಗುತ್ತಿದೆ. ಮತ್ತು ಪ್ರತಿದಿನ ನಗರಸಭೆ ಸಿಬ್ಬಂದಿಗಳು ಕಚೇರಿಯ ಕೆಲಸಕ್ಕೆ ಆದ್ಯತೆ ಕೊಡುವುದರ ಜೊತೆಗೆ ಮಾಸ್ಕ್ ಧರಿಸದೆ ಇರುವ ಸಾರ್ವಜನಿಕರಿಗೆ ಅರಿವು ಮೂಡಿಸಿ, ದಂಡ ಹಾಕುತ್ತಿದ್ದಾರೆ ಎಂದರು. ಈ ಸಂದರ್ಭದಲ್ಲಿ ಮಂಜುನಾಥ, ಕಿರಣ್ ಕುಮಾರ್, ಅಣ್ಣಪ್ಪ, ಪ್ರಕಾಶ್, ತಿಪ್ಪೇಸ್ವಾಮಿ, ಪೊಲೀಸ್ ಮುರುಳೀಧರ್, ಡಿ.ಟಿ. ಶ್ರೀನಿವಾಸ್ ಇನ್ನಿತರರಿದ್ದರು.

## ಜಿಲ್ಲಾ ಬಿಜೆಪಿಯಿಂದ ಕೊರೊನಾ ಸಹಾಯವಾಣಿ ಕೇಂದ್ರಗಳಿಗೆ ನೇಮಕ

ದಾವಣಗೆರೆ, ಏ. 22- ಬಿಜೆಪಿ ದಾವಣಗೆರೆ ಜಿಲ್ಲೆ ವತಿಯಿಂದ ಕೊರೊನಾ ಸಹಾಯವಾಣಿ ಕೇಂದ್ರದ ಪ್ರಮುಖರ ಪಟ್ಟಿಯನ್ನು ಜಿಲ್ಲಾಧ್ಯಕ್ಷ ವೀರೇಶ್ ಹನಗವಾಡಿ ನೇತೃತ್ವದಲ್ಲಿ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಬಿ.ಎಸ್. ಜಗದೀಶ್ ಈ ಕೆಳಕಂಡಂತೆ ಪ್ರಮುಖರನ್ನು ನೇಮಿಸಿದ್ದಾರೆ.

**ಸಹಾಯವಾಣಿ ಕೇಂದ್ರ :** ಬಿ.ಎಸ್. ಜಗದೀಶ್ (8951888886) ವಿಶ್ವಾಸ್ ಹೆಚ್.ಪಿ. (9606195810)

**ಆಸ್ಪತ್ರೆಗಳ ಮಾಹಿತಿ :** ಡಾ.ವಿಶ್ವನಾಥ (9611165067), ಜಿ.ವಿ ಗಂಗಾಧರ (9902055335), ಜಯಣ್ಣ (9380767290), ಲಿಂಗರಾಜ್ ಗೌಳಿ (9945298589)

**ಆಂಬ್ಯುಲೆನ್ಸ್ ಮಾಹಿತಿ :** ಪ್ರಸನ್ನಕುಮಾರ್ (9606331515), ಬಸವರಾಜಯ್ಯ (9886705660)

**ವ್ಯಾಕ್ಸಿನೇಷನ್ ಮಾಹಿತಿ :** ಡಾ.ನಂದಿನಿ (9743967065), ಶ್ರೀನಿವಾಸ ದಾಸಕರಿಯಪ್ಪ (9686343459), ಆನಂದರಾವ್ ಶಿಂಧೆ (9900405093), ಹೇಮಂತ್‌ಕುಮಾರ್ (9060866566)

**ವೆಂಟಿಲೇಶನ್ ಮಾಹಿತಿ :** ಡಾ. ಅವಿನಾಶ್ ಪಾಟೀಲ್ (9480170630), ಸಂಗನಗೌಡ (9986223050), ಅಜಯ್ ಕುಮಾರ್ (9901355877), ವಸಂತಕುಮಾರ್ (9886710329)

**ಕಚೇರಿ ವ್ಯವಹಾರಗಳು :** ಸೊಕ್ಕೆ ನಾಗರಾಜ (9448566874), ಮಂಜುಳ ಮಹೇಶ್ (9449669107), ಪುಷ್ಪವಾಲಿ (9964154364), ಭಾಗ್ಯ ಪಿಸಾಳೆ (8884127344), ಸರಸ್ವತಿ (9591600346)

**ಔಷಧಿಗಳ ಮಾಹಿತಿ :** ಹನುಮಂತಪ್ಪ (ವಕೀಲ) (8073145150), ಶಿವಾನಂದ ಆರ್. (9741703334) ರಾಜು ನೀಲಗುಂದ (9886399339)

**ಆಯುಷ್ಮಾನ್ ಭಾರತ್ ಕಾರ್ಡ್ ಮಾಹಿತಿ :** ಶಿವರಾಜ್ ಪಾಟೀಲ್ (9844422424), ಗೋಪಾಲ್‌ರಾವ್ ಮಾನೆ (9844455076), ಸೋಗಿ ಶಾಂತಕುಮಾರ್ (9980421712), ಹನುಮಂತನಾಯ್ಕ ಎನ್. (7353675222)

**ಅಂತ್ಯಸಂಸ್ಕಾರ ಸೇವೆ :** ಜಿ. ಮಂಜಾನಾಯ್ಕ (9731746282), ಶಿವಪ್ರಕಾಶ್ ಡಿ. ಆರ್ (8792664666)

## ದಸಂಸ ಹೆಸರು ಬಳಕೆ ಪ್ರಕರಣದ ತೀರ್ಪು ನೀಡಿದ ನ್ಯಾಯಾಲಯ : ಸ್ವಾಗತಾರ್ಹ





ಹರಿಹರ, ಏ.22- ಕರ್ನಾಟಕ ದಲಿತ ಸಂಘರ್ಷ ಸಮಿತಿ ಹೆಸರು ಬಳಕೆ ಪ್ರಕರಣದಲ್ಲಿ ಭದ್ರಾವತಿ ಹಿರಿಯ ಸಿವಿಲ್ ಕೋರ್ಟ್ ನೀಡಿರುವ ತೀರ್ಪನ್ನು ದಸಂಸ (ಪ್ರೊ.ಕೃಷ್ಣಪ್ಪ ಸ್ಥಾಪಿತ) ತಾಲ್ಲೂಕು ಶಾಖೆ ಸ್ವಾಗತಿಸಿದೆ.

1974ರಲ್ಲಿ ದಸಂಸಯನ್ನು ಹರಿಹರದವರೇ ಆದ ಪ್ರೊ.ಬಿ. ಕೃಷ್ಣಪ್ಪರ ನೇತೃತ್ವದಲ್ಲಿ ಸ್ಥಾಪಿಸಲಾಗಿತ್ತು. 1975ರಲ್ಲಿ ನೋಂದಾಯಿಸಲಾಗಿತ್ತು. 2008ರಲ್ಲಿ ಭದ್ರಾವತಿ ಸತ್ಯ, ವೆಂಕಟಗಿರಿ ಹಾಗೂ ಇತರರು ಸಹಕಾರ ಸಂಘಗಳ ಉಪ ನಿಬಂಧಕರಿಗೆ ದೂರು ಸಲ್ಲಿಸಿ, ದಸಂಸ ಎಂಬುದು ನಮ್ಮ ಸಮಿತಿಯಾಗಿದೆ. ಎಂ.ಗುರುಮೂರ್ತಿ ಅವರ ಹೆಸರಿನಲ್ಲಿ ಇಲ್ಲ ಎಂದು ಆಕ್ಷೇಪಣೆ ಸಲ್ಲಿಸಿದ್ದರು.

ನಂತರ ಪ್ರಕರಣ ಕೋರ್ಟ್ ಮೆಟ್ಟಿಲೇರಿತ್ತು. ಸುದೀರ್ಘ ವಿಚಾರಣೆ ನಂತರ ಇದೇ ಮಾ.24 ರಂದು ತೀರ್ಪು ನೀಡಿರುವ ಕೋರ್ಟ್ ಎಂ.ಗುರುಮೂರ್ತಿ ನೇತೃತ್ವದ ಬಣವೇ ನೈಜ ಸಮಿತಿಯಾಗಿದೆ ಎಂದು ಸ್ಪಷ್ಟಪಡಿಸಿದೆ ಎಂದು ತಾಲ್ಲೂಕು ಸಂಚಾಲಕ ಪಿ.ಜೆ.ಮಹಾಂತೇಶ್ ತಿಳಿಸಿದ್ದಾರೆ.

**ಇತರರು ಹೆಸರು ಬಳಸುವಂತಿಲ್ಲ :** ಇನ್ನು ಮುಂದೆ 47/74-75 ನೋಂದಣಿ ಸಂಖ್ಯೆ ಹೊಂದಿರುವ ಎಂ.ಗುರುಮೂರ್ತಿ ಬಣ ಬಿಟ್ಟು ಬೇರೆ ಯಾವ ಸಮಿತಿಯವರೂ ದಸಂಸ ಹೆಸರು ಬಳಸುವಂತಿಲ್ಲ. ಇದರ ಹೆಸರಿನಲ್ಲಿ ಸಮಾವೇಶ ನಡೆಸುವುದು, ಪತ್ರ ವ್ಯವಹಾರ ಮಾಡುವುದು, ಸಾಮಾನ್ಯ ಸಭೆ ಕರೆಯುವುದು ಕಾನೂನು ಬಾಹಿರವಾಗಿದೆ.

ಆದಾಗ್ಯೂ ಈಗಾಗಲೇ ವಿವಿಧ ದಸಂಸ ಬಣಗಳಿದ್ದು ಅವರು ಲೆಟರ್‌ಹೆಡ್ ಇನ್ನು ಮುಂದೆಯೂ ಬಳಸಿದಲ್ಲಿ, ಹೇಳಿಕೆಗಳನ್ನು ನೀಡಿದಲ್ಲಿ, ಸಮಾವೇಶ ಇತ್ಯಾದಿ ಮಾಡುವುದು ಅಪರಾಧವಾಗಿರುತ್ತದೆ.

ಈಗಾಗಲೇ ಕೆಲವರು ತಮ್ಮ ಅನಿವಾರ್ಯ ಕಾರಣಗಳಿಗೆ ದಸಂಸ ಹೆಸರಿನಲ್ಲಿ ಹಲವು ಬಣ ಸ್ಥಾಪಿಸಿದ್ದರು. ಆದರೀಗ ಪ್ರೊ.ಬಿ.ಕೃಷ್ಣಪ್ಪ ಸ್ಥಾಪಿತ ಸಂಘಟನೆಯೇ ಅಧಿಕೃತವಾಗಿದ್ದು, ಎಂ.ಗುರುಮೂರ್ತಿ ನೇತೃತ್ವದಲ್ಲಿಯೇ ಸಮಿತಿ ಮುಂದುವರೆಯಲಿದೆ. ಇದು ಪ್ರೊ.ಬಿ.ಕೃಷ್ಣಪ್ಪರ ಚಿಂತನೆ, ಹೋರಾಟಗಳಿಗೆ ಸಿಕ್ಕ ಜಯವಾಗಿದೆ ಎಂದರು.

**ಕೃಷ್ಣಪ್ಪ ಸಮಾಧಿಗೆ ಗುರುಮೂರ್ತಿ ಭೇಟಿ :** ಸುದೀರ್ಘ ಹೋರಾಟದ ನಂತರ ಕೋರ್ಟ್‌ನಲ್ಲಿ ಸಿಕ್ಕ ಜಯದ ಹಿನ್ನೆಲೆಯಲ್ಲಿ ನಾಳೆ ದಿನಾಂಕ 23 ರ ಶುಕ್ರವಾರ ಬೆಳಿಗ್ಗೆ 9.30ಕ್ಕೆ ದಸಂಸ ರಾಜ್ಯ ಸಂಚಾಲಕ ಎಂ.ಗುರುಮೂರ್ತಿ ಅವರು ತಮ್ಮ ಸಂಗಡಿಗರೊಂದಿಗೆ ಹನಗವಾಡಿ ಸಮೀಪದ ಮೈತ್ರಿವನದ ಪ್ರೊ.ಬಿ.ಕೃಷ್ಣಪ್ಪರ ಸಮಾಧಿಗೆ ಭೇಟಿ ನೀಡಿ ಪುಷ್ಪಾರ್ಚನೆ ಮಾಡಲಿದ್ದಾರೆ. ಕಾಯಕರ್ತರು ಕೋವಿಡ್ ನಿಯಮ ಪಾಲನೆಯೊಂದಿಗೆ ಭಾಗವಹಿಸಬೇಕೆಂದು ಅವರು ಕೋರಿದ್ದಾರೆ.

## ಈ ಬಾರಿ ಹೊಸಬರಿಗೆ ಅವಕಾಶ



**ಹಾವೇರಿ ಕಸಾಪ ಜಿಲ್ಲಾಧ್ಯಕ್ಷರ ಚುನಾವಣೆ: ಮತದಾರರ ಇಂಗಿತ**

ರಾಣೇಬೆನ್ನೂರು, ಏ.22- ಸಾಹಿತ್ಯ ಸೇವೆಯಲ್ಲಿ ತೊಡಗಿಕೊಂಡು ಸಾಕಷ್ಟು ಸೇವೆ ಸಲ್ಲಿಸಿರುವ, ಸಮಾನ ಮನಸ್ಕರೇ ಆಕಾಂಕ್ಷಿಗಳಾಗಿದ್ದೇವೆ ಎಂದು ಕಸಾಪ ಜಿಲ್ಲಾಧ್ಯಕ್ಷರ ಚುನಾವಣಾ ಅಭ್ಯರ್ಥಿ ಪ್ರಭುಲಿಂಗಪ್ಪ ಹಲಗೇರಿ ನಗರದ ಪ್ರವಾಸಿ ಮಂದಿರದಲ್ಲಿ ನಡೆದ ಮಾಧ್ಯಮಗೋಷ್ಠಿಯಲ್ಲಿ ಹೇಳಿದರು.

ಈಗಾಗಲೇ ಲಿಂಗಯ್ಯ ಹಾಗೂ ಮಾರುತಿ ಈ ಇಬ್ಬರೂ ಸ್ಪರ್ಧಿಗಳು ಅಧ್ಯಕ್ಷರಾಗಿ ಸೇವೆ ಸಲ್ಲಿಸಿದ್ದಾರೆ. ಹಾಗಾಗಿ ಹೊಸಬರಿಗೆ ಅವಕಾಶ ಕೊಡಬೇಕು ಎನ್ನುವ ಇಂಗಿತ ಕ್ಷೇತ್ರದ ಮತದಾರರದ್ದಾಗಿದೆ. ನನ್ನ ಹಿರಿಯ ಸಹೋದರರಂತಿರುವ ಈಡಿಗೇರ ಅವರು ಸ್ಪರ್ಧಿಗಳಾಗಿದ್ದರೂ ಸಹ, ಸಾಹಿತಿಗಳ ಒಲವು ನನ್ನ ಪರವಾಗಿದೆ ಎಂದು ಪ್ರಭುಲಿಂಗಪ್ಪ ವಿಶ್ವಾಸ ವ್ಯಕ್ತಪಡಿಸಿದರು.

86ನೇ ಸಾಹಿತ್ಯ ಸಮ್ಮೇಳನವನ್ನು ಹಾವೇರಿ ನಗರದಲ್ಲಿಯೇ ಅರ್ಥಪೂರ್ಣವಾಗಿ, ಜನರ ಮನದಲ್ಲಿ ಉಳಿಯುವಂತೆ ಆಚರಿಸಲಾಗುವುದು. ನಾಮಕರಣದ ಮೂಲಕ ಸಾಹಿತಿಗಳ, ಸಂಶೋಧಕರ ಹೆಸರುಗಳನ್ನು ಸ್ಮರಣೆಯಲ್ಲಿಡುವ ಹೆಳವನಕಟ್ಟೆ ಗಿರಿಯಮ್ಮ, ಗಳಗನಾಥ ಪ್ರಶಸ್ತಿ, ದತ್ತಿ ನಿಧಿ ಸ್ಥಾಪನೆ, ಜಿಲ್ಲಾ ಸಾಹಿತ್ಯ ಭವನ, ನಿರ್ಮಾಣ, ಗ್ರಾಮೀಣ ಭಾಗದಲ್ಲಿ ಘಟಕಗಳ ರಚನೆಯೊಂದಿಗೆ ಕನ್ನಡ ಸಾಹಿತ್ಯಕ್ಕೆ ಪ್ರೋತ್ಸಾಹ, ಜಿಲ್ಲಾ ತಾಲ್ಲೂಕು ಸಮ್ಮೇಳನಗಳ ಆಯೋಜನೆಗೆ ಒತ್ತು ಮುಂತಾದವುಗಳ ಪ್ರಣಾಳಿಕೆ ಜೊತೆಗೆ, ತಾವು ಮಾಡಿದ ಇದುವರೆಗಿನ ಸಾಹಿತ್ಯ ಸೇವೆಯ ಬಗ್ಗೆ ಪ್ರಭುಲಿಂಗಪ್ಪ ವಿವರಿಸಿದರು.

ವಾಣಿಜ್ಯೋದ್ಯಮ ಸಂಸ್ಥೆ ಉಪಾಧ್ಯಕ್ಷ ಜಿ.ಜಿ. ಹೊಟ್ಟಿಗೌಡ್ರ, ಸಾಧು ಲಿಂಗಾಯತ ಸಮಾಜದ ಅಧ್ಯಕ್ಷ ಮಲ್ಲೇಶಣ್ಣ ಅರಕೇರಿ, ವೀರಶೈವ ಮಹಾಸಭಾದ ಚಂದ್ರಣ್ಣ ಸೊಪ್ಪಿನ, ನಗರಸಭೆ ಸದಸ್ಯೆ ಗಂಗಮ್ಮ ಹಾವನೂರ, ನಗರಸಭೆ ಮಾಜಿ ಅಧ್ಯಕ್ಷೆ ರತ್ನ ಪುನೀತ, ಕಸಾಪ ಮಾಜಿ ಅಧ್ಯಕ್ಷ ಜಿ.ಬಿ. ಮಾಸಣಗಿ, ಕಾಂಗ್ರೆಸ್‌ನ ಎ.ಎಂ. ನಾಯಕ, ಬಿಜೆಪಿಯ ಜಯಣ್ಣ ಕರಡೇರ್ ಹಾಗೂ ಲಯನ್, ಜೇಸಿ ಪ್ರತಿನಿಧಿಗಳು ಗೋಷ್ಠಿಯಲ್ಲಿದ್ದರು.

## ಶ್ರೀರಾಮ ಸೇನೆಯಿಂದ ರಾಮ ನವಮಿ



ದಾವಣಗೆರೆ, ಏ. 22 - ಶ್ರೀರಾಮ ಸೇನೆಯಿಂದ ಶ್ರೀರಾಮ ನವಮಿಯ ಅಂಗವಾಗಿ ನಗರದ ಶಿಬಾರ ರಸ್ತೆಯ ಮೈಲಾರ ಲಿಂಗೇಶ್ವರ ದೇವಸ್ಥಾನ ಬಳಿ ಭಕ್ತರಿಗೆ ಪ್ರಸಾದ ವಿತರಣೆ ಮಾಡಲಾಯಿತು.

ಈ ಸಂದರ್ಭದಲ್ಲಿ ಶ್ರೀರಾಮಸೇನೆಯ ಜಿಲ್ಲಾಧ್ಯಕ್ಷ ಮಣಿ ಸರ್ಕಾರ್, ಜಿಲ್ಲಾ ಖಜಾಂಚಿ ಶ್ರೀಧರ್, ಪರಶುರಾಮ್ ನಡುಮನಿ, ಸುನೀಲ್ ವಾಲಿ, ಶಿಬಾರ ರಾಮು, ಸಾಗರ್, ಪರಶುರಾಮ್, ಶಶಿಕುಮಾರ್, ಮಂಜು, ಬಸವರಾಜ್ ಉಪಸ್ಥಿತರಿದ್ದರು. ಇದೇ ವೇಳೆ ಮುಖಂಡರುಗಳಿಗೆ ಸನ್ಮಾನಿಸಲಾಯಿತು.

## ನಗರದ ಪ್ರಮುಖ ಮಾರ್ಗಗಳಿಗೆ ಸಾಧಕರ ಹೆಸರಿಡಲು ಒತ್ತಾಯ

ದಾವಣಗೆರೆ, ಏ.22- ನಗರದ ಪ್ರಮುಖ ಮಾರ್ಗಗಳಿಗೆ (ರಸ್ತೆಗಳಿಗೆ) ಸಾಧಕರ ಹೆಸರುಗಳನ್ನಿಡುವಂತೆ ಜಿಲ್ಲಾ ಸಮಾಚಾರ ಬಳಗದ ಪದಾಧಿಕಾರಿಗಳು ಮಹಾನಗರ ಪಾಲಿಕೆಯ ಮಹಾಪೌರರನ್ನು ಒತ್ತಾಯಿಸಿದ್ದಾರೆ.


ನಗರದ ಯಾವುದಾದರೊಂದು ಮಾರ್ಗ (ರಸ್ತೆ) ಕ್ಕೆ ಖ್ಯಾತ ಲೇಖಕಿ ದಿ. ಟಿ. ಗಿರಿಜ ಅವರ ಹೆಸರನ್ನು, ಅಂಬೇಡ್ಕರ್ ವೃತ್ತದಿಂದ ಮೋದಿ ಕ್ಯಾಂಪಿನವರೆಗಿನ ರಸ್ತೆಗೆ ಪದ್ಮಶ್ರೀ ದಿ. ಚಿಂದೋಡಿ ಲೀಲಾ ಅವರ ಹೆಸರಿಡುವಂತೆ ಮೇಯರ್ ಎಸ್.ಟಿ ವೀರೇಶ್ ಹಾಗೂ ಆಯುಕ್ತ ವಿಶ್ವನಾಥ್ ಪಿ. ಮುದಜ್ಜಿ ಅವರಿಗೆ ಮನವಿ ಸಲ್ಲಿಸಿದರು.

ಈ ಸಂದರ್ಭದಲ್ಲಿ ಬಳಗದ ಪದಾಧಿಕಾರಿಗಳಾದ ವಿ. ಹನುಮಂತಪ್ಪ, ಡಾ. ಸಿ.ಕೆ ಆನಂದತೀರ್ಥಚಾರ್, ಸಾಲಿಗ್ರಾಮ ಗಣೇಶ್ ಶೆಣೈ, ಕೆ.ಎನ್ ಜಯಪ್ರಕಾಶ್, ಭಾರತಿ, ಎನ್.ಟಿ ಎರ್ರಿಸ್ವಾಮಿ, ಶ್ರೀಕುಮಾರ್ ಆನೆಕೊಂಡ, ಬಸವರಾಜ ಐರಣಿ, ಕೆ. ರಾಘವೇಂದ್ರ ನಾಯರಿ ಉಪಸ್ಥಿತರಿದ್ದರು.

## ಹೊನ್ನಾಳಿಯಲ್ಲಿಂದು ವಿದ್ಯುತ್ ವ್ಯತ್ಯಯ

ಹೊನ್ನಾಳಿ ಪಟ್ಟಣ ಮತ್ತು ಸುತ್ತಮುತ್ತಲಿನ ಹಳ್ಳಿಗಳಿಗೆ ಸಮಯ ಬೆಳಿಗ್ಗೆ 9 ರಿಂದ ಸಂಜೆ 5 ಗಂಟೆಯವರೆಗೆ ವಿದ್ಯುತ್ ವ್ಯತ್ಯಯವಾಗುವುದು ಎಂದು ಬೆಸ್ಕಾಂ ಪ್ರಕಟಣೆ ತಿಳಿಸಿದೆ.

## ಲಸಿಕೆ ಪಡೆದ ಸಚಿವ ಶಂಕರ್



ರಾಣೇಬೆನ್ನೂರು, ಏ.22- ತೋಟಗಾರಿಕೆ ಮತ್ತು ರೇಷ್ಮೆ ಸಚಿವ ಆರ್. ಶಂಕರ್ ಬೆಂಗಳೂರಿನ ಸರಕಾರಿ ಆಸ್ಪತ್ರೆಯಲ್ಲಿ ಕೋವಿಡ್ ಲಸಿಕೆ ಹಾಕಿಸಿಕೊಂಡರು. ರಾಜ್ಯದಲ್ಲಿ ಕೋವಿಡ್ ಎರಡನೇ ಅಲೆ ಹೆಚ್ಚುತ್ತಿರುವ ಹಿನ್ನೆಲೆಯಲ್ಲಿ ಪ್ರತಿಯೊಬ್ಬರೂ ಸ್ವಯಂಪ್ರೇರಿತರಾಗಿ ಕೋವಿಡ್ ಲಸಿಕೆ ಹಾಕಿಸಿಕೊಳ್ಳ ಬೇಕು ಎಂದು ಸಚಿವ ಶಂಕರ್ ಸಾರ್ವಜನಿಕರಲ್ಲಿ ಮನವಿ ಮಾಡಿದ್ದಾರೆ.

## ಪಿಸಿ, ಪಿಎನ್‌ಡಿಟಿ ಸಭೆ

ದಾವಣಗೆರೆ, ಏ. 22- ಜಿಲ್ಲಾ ಮಟ್ಟದ ಸಲಹಾ ಸಮಿತಿ ಪಿ.ಸಿ ಮತ್ತು ಪಿ.ಎನ್.ಡಿ.ಟಿ ಸಭೆಯನ್ನು ಇದೇ ದಿನಾಂಕ 27 ರಂದು ಸಂಜೆ 4 ಗಂಟೆಗೆ ದಾವಣಗೆರೆ ಉಪ ವಿಭಾಗಾಧಿಕಾರಿ ಕಛೇರಿ ಇಲ್ಲಿ ಆಯೋಜಿಸಲಾಗಿದೆ ಎಂದು ದಾವಣಗೆರೆ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳು ತಿಳಿಸಿದ್ದಾರೆ.

## ಆರ್ಯವೈಶ್ಯ ಯುವಜನ ಮಹಾಸಭಾ ಪ್ರ.ಕಾರ್ಯದರ್ಶಿಯಾಗಿ ಎಸ್. ಸುನಿಲ್

**ನಿರ್ದೇಶಕರಾಗಿ ದರ್ಶನ್ ಎಸ್. ಕಾಸಲ್ ಅವಿರೋಧ ಆಯ್ಕೆ**



ದಾವಣಗೆರೆ, ಏ.22- ಕರ್ನಾಟಕ ಆರ್ಯವೈಶ್ಯ ಯುವಜನ ಮಹಾಸಭಾ (ರಿ.), ಬೆಂಗಳೂರು ಇದರ 2021-2023ನೇ ಸಾಲಿನ ಅವಧಿಗೆ ದಾವಣಗೆರೆ ಎಸ್.ಕೆ.ಪಿ.ರಸ್ತೆ, ವಾಸವಿ ಯುವಜನ ಸಂಘದ ಸುನಿಲ್ ಎಸ್. ಪ್ರಧಾನ ಕಾರ್ಯದರ್ಶಿಯಾಗಿ ಹಾಗೂ ದರ್ಶನ್ ಎಸ್.ಕಾಸಲ್ ನಿರ್ದೇಶಕರಾಗಿ ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ಬೆಂಗಳೂರಿನ ಮಾಗಡಿಯಲ್ಲಿ ಇತ್ತೀಚೆಗೆ ನಡೆದ ಚುನಾವಣೆಯಲ್ಲಿ ಯಾರೂ ನಾಮಪತ್ರ ಸಲ್ಲಿಸದ ಕಾರಣ ಅವಿರೋಧ ಆಯ್ಕೆಯಾಗಿದೆ ಎಂದು ಚುನಾವಣಾಧಿಕಾರಿಗಳು ತಿಳಿಸಿದ್ದಾರೆ.

ಪ್ರಸ್ತುತ ಸುನಿಲ್ ದಾವಣಗೆರೆ ಎಸ್.ಕೆ.ಪಿ.ರಸ್ತೆ ವಾಸವಿ ಯುವಜನ ಸಂಘದ ಸಂಘಟನಾ ಕಾರ್ಯದರ್ಶಿಯಾಗಿ ಹಾಗೂ ದರ್ಶನ್ ಎಸ್.ಕಾಸಲ್ ಸಹಕಾರ್ಯದರ್ಶಿಯಾಗಿ ಸೇವೆ ಸಲ್ಲಿಸುತ್ತಿದ್ದಾರೆ.

## ವೆಂಕಟರಾಮಯ್ಯ ಅವರಿಗೆ ಸಂತಾಪ

ದಾವಣಗೆರೆ, ಏ.22 - ಇತ್ತೀಚೆಗೆ ನಿಧನರಾದ ಸಿರಿಗನ್ನಡ ವೇದಿಕೆಯ ರಾಜ್ಯಾಧ್ಯಕ್ಷ ಎಂ.ಎಸ್. ವೆಂಕಟರಾಮಯ್ಯ ಅವರಿಗೆ ದಾವಣಗೆರೆ ಜಿಲ್ಲೆಯ ಸಿರಿಗನ್ನಡ ವೇದಿಕೆಯ ಅಧ್ಯಕ್ಷ ಓಂಕಾರಯ್ಯ ತವನಿಧಿ, ಉಪಾಧ್ಯಕ್ಷ ವೀರಭದ್ರಪ್ಪ ತೆಲಗಿ, ವೀಣಾ ಕೃಷ್ಣಮೂರ್ತಿ ಮತ್ತಿತರರು ಸಂತಾಪ ವ್ಯಕ್ತಪಡಿಸಿದ್ದಾರೆ. ವೆಂಕಟರಾಮಯ್ಯ ಅವರು ಸುಮಾರು 19 ವರ್ಷಗಳ ಹಿಂದೆ ಸಿರಿಗನ್ನಡ ವೇದಿಕೆಯನ್ನು ಹುಟ್ಟು ಹಾಕಿ, ಆ ಮೂಲಕ ಅದರ ಶಾಖೆಗಳನ್ನು ನಾಡಿನಾದ್ಯಂತ ಸಂಘಟಿಸಿ, ಕನ್ನಡ ಸಾಹಿತ್ಯದ ಪರಿಮಳವನ್ನು ಎಲ್ಲೆಡೆ ಪಸರಿಸುವಲ್ಲಿ ಕಾರಣರಾಗಿದ್ದಾರೆಂದು ವೀಣಾ ಕೃಷ್ಣಮೂರ್ತಿ ಹಾಗೂ ಇನ್ನಿತರರು ತಿಳಿಸಿದ್ದಾರೆ.

## ವಿದ್ಯುತ್ ವ್ಯತ್ಯಯ

ಸರಸ್ವತಿ ಬಡಾವಣೆ ಎ ಮತ್ತು ಬಿ ಬ್ಲಾಕ್, ಜಯನಗರ ಎ, ಬಿ ಮತ್ತು ಸಿ ಬ್ಲಾಕ್ ಭೂಮಿಕ ನಗರ ಮತ್ತು ಸುತ್ತಮುತ್ತ ಪ್ರದೇಶಗಳು, ರಂಗನಾಥ ಬಡಾವಣೆ, ವಿದ್ಯಾನಗರ, ತರಳಬಾಳು ಬಡಾವಣೆ, ವಿನಾಯಕ ಬಡಾವಣೆ ಹಾಗೂ ಜರೀಕಟ್ಟೆ, ಮುದಹದಡಿ ಹಾಗೂ ಸುತ್ತಮುತ್ತಲಿನ ಪ್ರದೇಶಗಳಲ್ಲಿ ಇಂದು ಬೆಳಿಗ್ಗೆ 10 ರಿಂದ ಸಂಜೆ 5 ರವರೆಗೆ ವಿದ್ಯುತ್ ವ್ಯತ್ಯಯವಾಗಲಿದೆ.

## ಎನ್.ಜಿ.ಪಿ. ನಿವಾಸಕ್ಕೆ ಭಾಸ್ಕರ್ ರಾವ್ ಭೇಟಿ




ದಾವಣಗೆರೆ, ಏ.22- ರಾಜ್ಯದ ರೈಲ್ವೆ ಪೊಲೀಸ್ ಇಲಾಖೆಯ ಹಿರಿಯ ಅಧಿಕಾರಿ ಭಾಸ್ಕರ್ ರಾವ್ ಅವರು ಇಂದು ಸಂಜೆ ನಗರದ ಬಿಜೆಪಿ ಹಿರಿಯ ಮುಖಂಡ ಎನ್.ಜಿ. ಪುಟ್ಟಸ್ವಾಮಿ ನಿವಾಸಕ್ಕೆ ಭೇಟಿ ನೀಡಿದ್ದರು.

ಬೆಂಗಳೂರಿನಿಂದ ಬೆಳಗಾವಿಗೆ ತೆರಳುವ ಮಾರ್ಗ ಮಧ್ಯೆ ಎನ್.ಜಿ.ಪಿ. ನಿವಾಸಕ್ಕೆ ಆಗಮಿಸಿದ್ದು, ಭಾಸ್ಕರ್ ರಾವ್ ಅವರನ್ನು ಪುಟ್ಟಸ್ವಾಮಿ ಮತ್ತು ಅವರ ಕುಟುಂಬ ವರ್ಗದವರು ಸತ್ಕಾರ ನೀಡಿ ಸನ್ಮಾನಿಸಿ, ಗೌರವಿಸಿದರು.

ಎಸ್ಪಿ ಹನುಮಂತರಾಯ, ಮುಖಂಡ ಮುದೇಗೌಡ್ರ ವಿಶ್ವನಾಥ್, ಹಿರಿಯ ಪತ್ರಕರ್ತ ಕೆ. ಚಂದ್ರಣ್ಣ, ನಗರ ಪಾಲಿಕೆ ಮಾಜಿ ಸದಸ್ಯ ಹೆಚ್.ಎನ್. ಶಿವಕುಮಾರ್, ವರ್ತಕರಾದ ಕಿರಣ್ ವಾಲಾವಲ್ಕರ್, ರಾಮ್ ಜೀ, ವಿದ್ಯಾನಗರ ಠಾಣೆ ಸಬ್ ಇನ್ ಸ್ಪೆಕ್ಟರ್ ರೂಪಾ ತೆಂಬದ್ ಮತ್ತಿತರರು ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು.

## ಕಸಾಪ ಕಾರ್ಯಕ್ಷೇತ್ರಕ್ಕೆ ಯುವಕರು ಬರಲಿ



ದಾವಣಗೆರೆ, ಏ. 22- ಕನ್ನಡ ಸಾಹಿತ್ಯ ಪರಿಷತ್ತು ಸಮಸ್ತ ಕನ್ನಡಿಗರ ಪ್ರಾತಿನಿಧಿಕ ಸಂಸ್ಥೆಯಾಗಿದ್ದು, ಪರಿಷತ್ತಿನ ಶ್ರೇಯೋಭಿವೃದ್ಧಿಗೆ ಕಲೆ, ಸಾಹಿತ್ಯ, ಸಂಸ್ಕೃತಿಯ ಬಗ್ಗೆ ಅರಿವಿರುವ ಯುವ ನೇತಾರರು ನೇತೃತ್ವ ವಹಿಸಿಕೊಂಡಲ್ಲಿ ಸಮಾಜದಲ್ಲಿ ಹೊಸ ಬದಲಾವಣೆ ತರಲು ಸಾಧ್ಯ ಎಂದು ಹಿರಿಯ ಮುತ್ಸದ್ದಿಗಳು ಅಭಿಪ್ರಾಯಪಟ್ಟರು.

ಸ್ಥಳೀಯ ವಿದ್ಯಾನಗರದ ಶ್ರೀ ಈಶ್ವರ - ಪಾರ್ವತಿ ದೇವಸ್ಥಾನದ ಬಳಿ ಇಂದು ನಡೆದ ಚಹಾ ಕೂಟದ ಸಂದರ್ಭದಲ್ಲಿ ದಾವಣಗೆರೆ ಜಿಲ್ಲಾ ಕಸಾಪ ಚುನಾವಣಾ ಅಭ್ಯರ್ಥಿ ಆರ್. ಶಿವಕುಮಾರಸ್ವಾಮಿ ಕುರ್ಕಿ ಅವರ ಪರಿಚಯ ಪತ್ರ ಹಾಗೂ ಶರಣ ಸಂಸ್ಕೃತಿ ಕ್ಯಾಲೆಂಡರ್ ಬಿಡುಗಡೆ ಮಾಡಿದ ಸಂದರ್ಭದಲ್ಲಿ ಶಿವಕುಮಾರಸ್ವಾಮಿ ಕುರ್ಕಿ ಅವರಿಗೆ ಶುಭ ಹಾರೈಸಲಾಯಿತು. ಇದೇ ಸಂದರ್ಭದಲ್ಲಿ ತಮ್ಮನ್ನು ಜಿಲ್ಲಾ ಕಸಾಪ ಅಧ್ಯಕ್ಷತೆಗೆ ಆಯ್ಕೆ ಮಾಡುವಂತೆ ಶಿವಕುಮಾರಸ್ವಾಮಿ ಕೇಳಿಕೊಂಡರು.

ಈ ಸಂದರ್ಭದಲ್ಲಿ ಮಹಾನಗರ ಪಾಲಿಕೆ ಮಾಜಿ ಉಪ ಮಹಾಪೌರರಾದ ಬೆಳವನೂರು ನಾಗರಾಜಪ್ಪ, ಮಾಜಿ ಮಹಾಪೌರರಾದ ಕೆ.ಆರ್.ವಸಂತಕುಮಾರ್, ಸಮಾಜದ ಮುಖಂಡರುಗಳಾದ ತೆಲಗಿ ರುದ್ರೇಶಪ್ಪ, ಸಿದ್ದನೂರು ಎಸ್.ಎಂ.ಮಹೇಶ್ವರಯ್ಯ, ಡಿ.ಜಿ.ಸುಭಾಷ್, ಎನ್.ಜಿ. ಪುಟ್ಟಸ್ವಾಮಿ, ಬಾಲಚಂದ್ರಪ್ಪ ಮುದಗುಂಡಿ, ಯುವ ಮುಖಂಡರಾದ ಕೋಗಲೂರು ಎಸ್.ಬಿ. ಶಿವಕುಮಾರ್, ಕಂದಗಲ್ಲು ಸತೀಶ್ ಪಾಟೀಲ್, ಕಲ್ಪನಹಳ್ಳಿ ಕೆ. ಎಸ್. ರವೀಂದ್ರನಾಥ, ಲೆಕ್ಕಪರಿಶೋಧಕ ಕುಮಾರಪ್ಪ, ಕೆನರಾ ಬ್ಯಾಂಕ್ ನಿವೃತ್ತ ಅಧಿಕಾರಿ ಅಜಿತ್ ಸೇನ್ ಮುಂತಾದವರು ಉಪಸ್ಥಿತರಿದ್ದರು.


**ಮಾನ್ಯ ಘನ ಪ್ರಿನ್ಸಿಪಲ್ ಸಿವಿಲ್ ಜಡ್ಜ್ (ಹಿ.ವಿ) ನ್ಯಾಯಾಲಯದಲ್ಲಿ ದಾವಣಗೆರೆ.**

**ಜಿ ಅಂಡ್ ಡಬ್ಲ್ಯೂ ಸಿ 09 / 2020**

**ಅರ್ಜಿದಾರರು :** ಶ್ರೀಮತಿ ಸಾವಿತ್ರಮ್ಮ ಕೋಂ. ಲೇಟ್ ಚಂದ್ರಶೇಖರಪ್ಪ ವಯಸ್ಸು 43 ವರ್ಷ, ಸಿದ್ದನೂರು ವಾಸಿ ದಾವಣಗೆರೆ ತಾಲ್ಲೂಕು - ವಿರುದ್ಧ - ಎದುರುದಾರರು : ಯಾರೂ ಇಲ್ಲ

**ಸಿ.ಪಿ.ಸಿ. ಕಾಯ್ದೆ ಆದೇಶ 5 ನಿಯಮ 20 ರೇ/ವಿ ಕಲಂ 151 ಅಡಿಯಲ್ಲಿ ಪತ್ರಿಕಾ ಪ್ರಕಟಣೆ**

ಮೇಲ್ಕಂಡ ಕೇಸನ್ನು ಅರ್ಜಿದಾರರು ದಾವಣಗೆರೆ ಪ್ರಾಥಮಿಕ ಸಹಕಾರಿ ಕೃಷಿ ಮತ್ತು ಅಭಿವೃದ್ಧಿ ಬ್ಯಾಂಕಿನಲ್ಲಿ ತಮ್ಮ ಜಮೀನಿನ ಮೇಲೆ ಸಾಲವನ್ನು ಪಡೆದುಕೊಳ್ಳಲು ಅರ್ಜಿಯನ್ನು ಸಲ್ಲಿಸಿರುತ್ತಾರೆ. ಮಗ ಸಂತೋಷ್.ಬಿ.ಸಿ ಪ್ರಾಪ್ತ ವಯಸ್ಕನಾಗಿದ್ದು ಸಂಜನಾ ಅಪ್ರಾಪ್ತ ವಯಸ್ಕಳಾಗಿರುತ್ತಾಳೆ. ಸಂಜನ ಅಪ್ರಾಪ್ತ ವಯಸ್ಕಳಾದ ಕಾರಣ ದಾವಣಗೆರೆ ಪ್ರಾಥಮಿಕ ಸಹಕಾರಿ ಕೃಷಿ ಮತ್ತು ಅಭಿವೃದ್ಧಿ ಬ್ಯಾಂಕಿನವರು ಸಾಲ ಪಡೆಯಲು ಮೈನರ್ ಪರವಾಗಿ ನ್ಯಾಯಾಲಯದಿಂದ ಪರವಾನಗಿ ಆದೇಶ ಪತ್ರವನ್ನು ತರಲು ತಿಳಿಸಿ ಹಿಂಬರಹವನ್ನು ನೀಡಿರುತ್ತಾರೆ. ಆದ್ದರಿಂದ ಅರ್ಜಿದಾರರು ಪರವಾನಗಿ ಆದೇಶ ಪತ್ರ ಕೋರಿ ಮಾನ್ಯ ನ್ಯಾಯಾಲಯಕ್ಕೆ ಅರ್ಜಿ ಸಲ್ಲಿಸಿರುತ್ತಾರೆ.

ಇದಕ್ಕೆ ಸಂಬಂಧಿಸಿದಂತೆ ಬೇರೆ ಯಾರಾದರೂ ತಕರಾರು ಮಾಡುವವರು ಇದ್ದಲ್ಲಿ ನಿಮ್ಮ ಹಾಜರಾತಿಗಾಗಿ ದಿನಾಂಕ 01.06.2021 ರಂದು ಬೆಳಿಗ್ಗೆ 11-00 ಗಂಟೆಗೆ ನೀವು ಖುದ್ದಾಗಿ ಅಥವಾ ವಕೀಲರ ಮುಖಾಂತರವಾಗಲೀ ಪ್ರಕರಣದಲ್ಲಿ ಹಾಜರಿದ್ದು ತಕರಾರು ಇದ್ದಲ್ಲಿ ಸಲ್ಲಿಸತಕ್ಕದ್ದು. ತಪ್ಪಿದಲ್ಲಿ ಸದರಿ ಪ್ರಕರಣವನ್ನು ಏಕಪಕ್ಷೀಯವಾಗಿ ತೀರ್ಮಾನ ತೆಗೆದುಕೊಳ್ಳಲಾಗುವುದು ತಿಳಿಯಿರಿ. ನ್ಯಾಯಾಲಯದ ಮೊಹರು ಹಾಗೂ ಸಹಿಯೊಂದಿಗೆ ದಿನಾಂಕ 19.04.2021 ರಂದು ಕೊಡಲ್ಪಟ್ಟಿದೆ.

**ಅರ್ಜಿದಾರರ ಪರ ವಕೀಲರು (ಕೆ.ಸಿ. ಪ್ರಭು) ವಕೀಲರು, ದಾವಣಗೆರೆ.**

**ನ್ಯಾಯಾಲಯದ ಆದೇಶದ ಮೇರೆಗೆ ಶಿರಸ್ತೇದಾರರು, ಮಾನ್ಯ ಘನ ಪ್ರಿನ್ಸಿಪಲ್ ಸಿವಿಲ್ ಜಡ್ಜ್ (ಹಿ.ವಿ) ನ್ಯಾಯಾಲಯ, ದಾವಣಗೆರೆ.**

**ದಾವಣಗೆರೆ ಎರಡನೇ ಹೆಚ್ಚುವರಿ ಹಿರಿಯ ಸಿವಿಲ್ ಜಡ್ಜ್ ಕೋರ್ಟಿನಲ್ಲಿ ಪಿ.ಅಂಡ್ ಎಸ್ ಸಿ ನಂ 9:2021**

ಅರ್ಜಿದಾರರು : **1) ಸುನೀತ ಕೆ.ಹುಲ್ಮನಿ ಕೋಂ ಕರಬಸಪ್ಪ ಜಿ. ಹುಲ್ಮನಿ ಸುಮಾರು 52 ವರ್ಷ,**

**2) ಸೌಜನ್ಯ ಕೆ. ಹುಲ್ಮನಿ ಬಿನ್ ಕರಬಸಪ್ಪ ಜಿ. ಹುಲ್ಮನಿ ಸುಮಾರು 26 ವರ್ಷ,**

**3) ಶಶಾಂಕ ಕೆ.ಹುಲ್ಮನಿ ಬಿನ್ ಕರಬಸಪ್ಪ ಜಿ.ಹುಲ್ಮನಿ ಸುಮಾರು 20 ವರ್ಷ,**

ಎಲ್ಲರ ವಾಸ: ಮನೆ ನಂ 3992/67, 11ನೇ ಕ್ರಾಸ್, ಯೂರೋ ಕಿಡ್ಸ್, ಆಂಜನೇಯ ಬಡಾವಣೆ, ದಾವಣಗೆರೆ 577004.

ವಿರುದ್ಧ

ಎದುರುದಾರರು : **ಯಾರೂ ಇಲ್ಲ**

**ಸಿ.ಪಿ.ಸಿ ಆದೇಶ 5 ನಿಯಮ 20 ರ ಅಡಿಯಲ್ಲಿ ಪತ್ರಿಕಾ ಪ್ರಕಟಣೆ**

ಮೇಲ್ಕಂಡ ಅರ್ಜಿದಾರರು ಈ ಕೆಳಕಂಡ ಷೆಡ್ಯೂಲ್‌ನಲ್ಲಿ ಕಾಣಿಸಿರುವ ಷೇರುಗಳ ಬಗ್ಗೆ ಮೃತ ಕರಬಸಪ್ಪ ಜಿ. ಹುಲ್ಮನಿ ಇವರ ಹೆಸರಿನಿಂದ ತಮ್ಮ ಹೆಸರಿಗೆ ವರ್ಗಾಯಿಸಿಕೊಳ್ಳಲು ಸಕ್ಸೆಷನ್ ಸರ್ಟಿಫಿಕೇಟ್ ಕೊಡಲು ಕೋರಿ ಸನ್ನಿಧಿ ಕೋರ್ಟಿಗೆ ಅರ್ಜಿ ಸಲ್ಲಿಸಿರುತ್ತಾರೆ. ಈ ಬಗ್ಗೆ ಯಾರದಾದರೂ ತಕರಾರು ಅಥವಾ ಹಕ್ಕು ಇದ್ದಲ್ಲಿ, ಅವರು ಸನ್ನಿಧಿ ಕೋರ್ಟಿನಲ್ಲಿ ದಿನಾಂಕ 26.5.21 ರಂದು ಬೆಳಗ್ಗೆ 11 ಗಂಟೆಗೆ ಖುದ್ದಾಗಿ ಅಥವಾ ವಕೀಲರ ಮೂಲಕ ಹಾಜರಾಗಿ ತಕರಾರನ್ನು ಸಲ್ಲಿಸತಕ್ಕದ್ದು. ತಪ್ಪಿದಲ್ಲಿ ಏಕಪಕ್ಷೀಯವೆಂದು ಪರಿಗಣಿಸಿ ಪ್ರಕರಣವನ್ನು ವಿಲೇಪಡಿಸಲಾಗುವುದು ತಿಳಿಯಿರಿ.

**ಷೆಡ್ಯೂಲ್**

1100 Shares of Larsen & Toubro-EQ2 bearing code No. ISIN INEO 18A 01030-allotted through Sharekhan limited (DPID-12036000) (12036000), Client I.D No.00695948, Standing in the name of the late Karabasappa G. Hulmani, worth Rs. 14,21,365/-.

**ನ್ಯಾಯಾಲಯದ ಮೊಹರು ಹಾಗೂ ಸಹಿಯೊಂದಿಗೆ ದಿನಾಂಕ 22.4.21 ರಂದು ಹೊರಡಿಸಲ್ಪಟ್ಟಿದೆ.**

**(ಎನ್.ಟಿ ಮಂಜುನಾಥ)** ಅರ್ಜಿದಾರರ ಪರ ವಕೀಲರು.

ನ್ಯಾಯಾಲಯದ ಆದೇಶದ ಮೇರೆಗೆ ಶಿರಸ್ತೇದಾರರು

ಸ್ಥಳ : ದಾವಣಗೆರೆ ದಿನಾಂಕ: 22.4.2021 **ಪ್ರಧಾನ ಹಿರಿಯ ಸಿವಿಲ್ ಜಡ್ಜ್‌ರವರ ನ್ಯಾಯಾಲಯ, ದಾವಣಗೆರೆ.**

**ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ**

**ದಾವಣಗೆರೆ ವಿಭಾಗ, ದಾವಣಗೆರೆ.**

**ಸಂಖ್ಯೆ: ಕರಾಸಾ/ದಾವಿ/ಸಂಚಾರ/ವಾಣಿಜ್ಯ/54/2021-22 ದಿನಾಂಕ: 17-04-2021**

**ಸಂಧಾನ ಪ್ರಕಟಣೆ ಸಂಖ್ಯೆ: 01/2021-22**

ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ, ದಾವಣಗೆರೆ ವಿಭಾಗದ ವ್ಯಾಪ್ತಿಗೆ ಬರುವ **ಹರಿಹರ** ಬಸ್ ನಿಲ್ದಾಣದ ಜನರಲ್ ಸ್ಟಾಲ್ - 05, **ಮಲೇಬೆನ್ನೂರು** ಬಸ್ ನಿಲ್ದಾಣದ ಉಪಹಾರ ಗೃಹ, **ಜಗಳೂರು** ಬಸ್ ನಿಲ್ದಾಣದ ಜನರಲ್ ಸ್ಟಾಲ್ ಮಳಿಗೆ ಸಂಖ್ಯೆ - 02 ಮತ್ತು **ಜಗಳೂರು** ಜನರಲ್ ಸ್ಟಾಲ್ ಮಳಿಗೆ ಸಂಖ್ಯೆ - 03 ಇವುಗಳನ್ನು ಸಂಧಾನ (ಮಾತುಕತೆ) ದ ಮೂಲಕ ಮೇಲ್ಕಂಡ ಖಾಲಿಯಿರುವ / ಖಾಲಿಯಾಗಲಿರುವ ಶಾಶ್ವತ / ತೆರೆದ ವಾಣಿಜ್ಯ ಮಳಿಗೆಗಳಿಗೆ ಪರವಾನಗಿದಾರರನ್ನು ಆಯ್ಕೆ ಮಾಡಲು **ಸಂಧಾನ** ಆಹ್ವಾನಿಸಲಾಗಿದೆ.

ಸದರಿ ಮಾಹಿತಿಯನ್ನು ನಿಗಮದ ವೆಬ್‌ಸೈಟ್: **ksrtc.karnataka.gov.in** ನಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು ಹಾಗೂ ಹೆಚ್ಚಿನ ವಿವರಗಳಿಗಾಗಿ **ವಿಭಾಗೀಯ ಕಛೇರಿ, ಕ.ರಾ.ರ.ಸಾ. ನಿಗಮ, ದಾವಣಗೆರೆ ವಿಭಾಗ - 577002** ಇಲ್ಲಿ ಕಛೇರಿ ಅವಧಿಯಲ್ಲಿ ಸಂಪರ್ಕಿಸಲು ಕೋರಲಾಗಿದೆ. ಸಂಪರ್ಕಿಸುವ ದೂರವಾಣಿ ಸಂಖ್ಯೆ: **ವಿಭಾಗೀಯ ಸಂಚಾರ ಅಧಿಕಾರಿ - 7760990452, ಸಹಾಯಕ ಸಂಚಾರ ವ್ಯವಸ್ಥಾಪಕರು - 7760990461.**

ಸಹಿ/- ವಿಭಾಗೀಯ ನಿಯಂತ್ರಣಾಧಿಕಾರಿ, ಕ.ರಾ.ರ.ಸಾ. ನಿಗಮ, ದಾವಣಗೆರೆ ವಿಭಾಗ.

ವಾಸಾಸಂಇ/ಬೆಂ.ನ/ಅಡ್ವರ್ಟೋ/249/2021-22

**ಕೋವಿಡ್-19. ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ.**

ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

**ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ**

**ದಾವಣಗೆರೆ ವಿಭಾಗ, ದಾವಣಗೆರೆ.**

**ಸಂಖ್ಯೆ: ಕರಾಸಾ/ದಾವಿ/ಸಂಚಾರ/ವಾಣಿಜ್ಯ/55/2021-22 ದಿನಾಂಕ: 17-04-2021**

**ಸಂಧಾನ ಪ್ರಕಟಣೆ ಸಂಖ್ಯೆ: 02/2021-22**

(ಬಸ್ ನಿಲ್ದಾಣಗಳ ಹೊರ ಮತ್ತು ಒಳ ಆವರಣದ ಜಾಹೀರಾತುಗಳಿಗೆ ಪ್ಯಾಕೇಜ್ ಮಾದರಿಯಲ್ಲಿ)

ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ, ದಾವಣಗೆರೆ ವಿಭಾಗದ ವ್ಯಾಪ್ತಿಯಲ್ಲಿ ಇರುವ **ಜಗಳೂರು, ಹರಿಹರ (ಒಳ ಆವರಣ)** ಮತ್ತು **ಮಲೇಬೆನ್ನೂರು (ಹೊರ ಆವರಣ)** ಬಸ್ ನಿಲ್ದಾಣಗಳ ಹೊರ ಭಾಗದಲ್ಲಿ ಯೂನಿಫೋಲ್ಸ್, ಹೋರ್ಡಿಂಗ್ಸ್ ಮತ್ತು ಆರ್ಚ್‌ಗಳಿಗೆ ಹಾಗೂ ಒಳ ಆವರಣದಲ್ಲಿ ಸಿ.ಸಿ. ಟಿವಿ, ವೀಡಿಯೋ ವಾಲ್, ನಿಯಾನ್ ಸೈನ್ಸ್, ಗ್ಲೋಸೈನ್, ಪಿಲ್ಲರ್ ಬೋರ್ಡ್, ಪ್ಲಾಟ್ ಫಾರಂ ಬೋರ್ಡ್‌ಗಳು ಖಾಲಿ ಇದ್ದು, ಸದರಿ ಬಸ್ ನಿಲ್ದಾಣಗಳ ಒಳ ಮತ್ತು ಹೊರ ಭಾಗದ ಸ್ಥಳಗಳಿಗೆ ಪರವಾನಗಿದಾರರನ್ನು ಆಯ್ಕೆ ಮಾಡಲು **ಮಾತುಕತೆಯ ಮೂಲಕ** ಸಂಧಾನ ಕರೆಯಲಾಗಿರುತ್ತದೆ. ಸದರಿ ಸಂಧಾನ ದಸ್ತಾವೇಜುಗಳನ್ನು ನಿಗಮದ ವೆಬ್‌ಸೈಟ್: **ksrtc.karnataka.gov.in** ನಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು ಹಾಗೂ ಹೆಚ್ಚಿನ ವಿವರಗಳಿಗಾಗಿ **ವಿಭಾಗೀಯ ಕಛೇರಿ, ಕ.ರಾ.ರ.ಸಾ. ನಿಗಮ, ದಾವಣಗೆರೆ ವಿಭಾಗ - 577002** ಇಲ್ಲಿ ಕಛೇರಿ ಅವಧಿಯಲ್ಲಿ ಸಂಪರ್ಕಿಸಲು ಕೋರಲಾಗಿದೆ. ಸಂಪರ್ಕಿಸುವ ದೂರವಾಣಿ ಸಂಖ್ಯೆ: **ವಿಭಾಗೀಯ ಸಂಚಾರ ಅಧಿಕಾರಿ - 7760990452, ಸಹಾಯಕ ಸಂಚಾರ ವ್ಯವಸ್ಥಾಪಕರು - 7760990461.**

ಸಹಿ/- ವಿಭಾಗೀಯ ನಿಯಂತ್ರಣಾಧಿಕಾರಿ, ಕ.ರಾ.ರ.ಸಾ. ನಿಗಮ, ದಾವಣಗೆರೆ ವಿಭಾಗ.

ವಾಸಾಸಂಇ/ಬೆಂ.ನ/ಅಡ್ವರ್ಟೋ/250/2021-22

**ಕೋವಿಡ್-19 ಲಕ್ಷಣಗಳು ಇವೆಯೇ? ಸಂಪರ್ಕಿಸಿ, ಆಪ್ತಮಿತ್ರ ಸಹಾಯವಾಣಿ 14410.**

ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

## ಇಂದಿನಿಂದ ನಗರದೇವತೆ ದುರ್ಗಾಂಬಿಕಾ ದೇವಿ ದರ್ಶನವಿಲ್ಲ



ದಾವಣಗೆರೆ, ಏ. 22 - ನಗರ ದೇವತೆ ಶ್ರೀ ದುರ್ಗಾಂಬಿಕಾ ದೇವಿ ದೇವಸ್ಥಾನದಲ್ಲಿ ಶ್ರೀದೇವಿಯ ದರ್ಶನವನ್ನು ನಾಳೆ ದಿನಾಂಕ 23ರ ಶುಕ್ರವಾರದಿಂದ ಮುಂದಿನ ಆದೇಶದವರೆಗೆ ಸಂಪೂರ್ಣವಾಗಿ ನಿಷೇಧಿಸಲಾಗಿದೆ. ಪ್ರತಿ ಮಂಗಳವಾರ ಮತ್ತು ಶುಕ್ರವಾರಗಳಂದು ನಡೆಯುತ್ತಿದ್ದ ದಾಸೋಹವನ್ನೂ ತಾತ್ಕಾಲಿಕವಾಗಿ ನಿಲ್ಲಿಸಲಾಗಿದೆ.

ಕೋವಿಡ್-19 ಎರಡನೇ ಅಲೆ ಹೆಚ್ಚುತ್ತಿರುವುದರಿಂದ ಸರ್ಕಾರದ ಆದೇಶದನ್ವಯ ಜಿಲ್ಲಾಧಿಕಾರಿ ಮತ್ತು ಪೊಲೀಸ್ ವರಿಷ್ಠಾಧಿಕಾರಿಗಳ ಸೂಚನೆಯಂತೆ ಶ್ರೀ ದುರ್ಗಾಂಬಿಕಾ ದೇವಿಯ ದರ್ಶನವನ್ನು ನಿಲ್ಲಿಸಿದ್ದು, ಪ್ರತಿದಿನ ಬೆಳಿಗ್ಗೆ 6 ರಿಂದ 8 ಗಂಟೆಯವರೆಗೆ ಪೂಜೆ ನಡೆಯುವುದು. ನಂತರ ಬೆಳಿಗ್ಗೆ 8 ರಿಂದ ದೇವಸ್ಥಾನದ ಬಾಗಿಲನ್ನು ಮುಚ್ಚಲಾಗುವುದು ಎಂದು ದೇವಸ್ಥಾನದ ಟ್ರಸ್ಟ್ ಅಧ್ಯಕ್ಷರೂ ಆದ ಶಾಸಕ ಶಾಮನೂರು ಶಿವಶಂಕರಪ್ಪ ತಿಳಿಸಿದ್ದಾರೆ. ಭಕ್ತಾದಿಗಳು ಹಾಗೂ ಸಾರ್ವಜನಿಕರು ಸಹಕರಿಸಬೇಕೆಂದು ಧರ್ಮದರ್ಶಿ ಗೌಡ್ರ ಚನ್ನಬಸಪ್ಪ ಮನವಿ ಮಾಡಿದ್ದಾರೆ.

## ಹರಿಹರ ಎಪಿಎಂಸಿಗೆ ರಜೆ

ದಾವಣಗೆರೆ, ಏ. 22- ಕೊರೊನಾ 19 ಸಾಂಕ್ರಾಮಿಕ ರೋಗ ಹೆಚ್ಚಾಗಿ ಹರಡುತ್ತಿರುವ ಹಿನ್ನೆಲೆಯಲ್ಲಿ ರಾಜ್ಯ ಸರ್ಕಾರದ ಮಾರ್ಗಸೂಚಿ ಅನ್ವಯವಾಗಿ ಕರ್ಫ್ಯೂ ಜಾರಿಯಲ್ಲಿರುವುದರಿಂದ ಹಾಗೂ ಕೃಷಿ ಮಾರುಕಟ್ಟೆ ಇಲಾಖೆಯ ನಿರ್ದೇಶಕರ ಆದೇಶದಂತೆ ಮೇ 04 ರವರೆಗೆ ಬರುವ ಪ್ರತಿ ಶನಿವಾರ ಮತ್ತು ಭಾನುವಾರಗಳಂದು ಹರಿಹರ ಕೃಷಿ ಉತ್ಪನ್ನ ಮಾರುಕಟ್ಟೆಯಲ್ಲಿ ವ್ಯಾಪಾರ, ವಹಿವಾಟುಗಳನ್ನು ಸ್ಥಗಿತಗೊಳಿಸಿ ಮಾರುಕಟ್ಟೆಗೆ ರಜಾ ದಿನವೆಂದು ಘೋಷಿಸಲಾಗಿದೆ ಎಂದು ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಯ ಕಾರ್ಯದರ್ಶಿಗಳು ತಿಳಿಸಿದ್ದಾರೆ.

# ಜೀವ ಸಂಕುಲಕ್ಕೆ ಆಪತ್ತು, ಪುನಶ್ಚೇತನಕ್ಕೆ ಶಿಫಾರಸ್ಸು

ದಾವಣಗೆರೆ, ಏ.22 - ಕುಂದುವಾಡ ಕೆರೆ ಅಭಿವೃದ್ಧಿ ಯೋಜನೆಯಿಂದ ಕೆರೆ ಪರಿಸರದ ಜೀವ ಸಂಕುಲ ಆಪತ್ತಿಗೆ ಸಿಲುಕಿದೆ ಎಂಬ ವ್ಯಾಪಕ ಸಾರ್ವಜನಿಕ ಆಕ್ಷೇಪಗಳ ಹಿನ್ನೆಲೆಯಲ್ಲಿ ಕರ್ನಾಟಕ ಜೀವವೈವಿಧ್ಯ ಮಂಡಳಿ ಅಧ್ಯಕ್ಷ ಅನಂತ ಹೆಗಡೆ ಆಶೀಸರ ನೇತೃತ್ವದ ತಂಡ ಕುಂದುವಾಡ ಕೆರೆ ಪ್ರದೇಶಕ್ಕೆ ನಿನ್ನೆ ಭೇಟಿ ನೀಡಿ ಪರಿಸರ ಪರಿಸ್ಥಿತಿ ವೀಕ್ಷಣೆ ಮಾಡಿ ವರದಿ ಸಲ್ಲಿಸಿದ್ದಾರೆ.

ದಿನದಿಂದ ದಿನಕ್ಕೆ ಕೊರೊನಾ ಸೋಂಕು ವ್ಯಾಪಕವಾಗಿ ಹರಡುತ್ತಿರುವ ನಿಟ್ಟಿನಲ್ಲಿ ಸಾರ್ವಜನಿಕ ಸಭೆ ಏರ್ಪಡಿಸದೆ. ತಂಡವು ಅರಣ್ಯ ಅಧಿಕಾರಿಗಳು, ಮಹಾನಗರಪಾಲಿಕೆ, ಸ್ಮಾರ್ಟ್ ಸಿಟಿ ಅಧಿಕಾರಿ ಗಳೊಂದಿಗೆ ಕೆರೆ ವೀಕ್ಷಣೆ ಮಾಡಲಾಯಿತು. ಕೆರೆ ಅಭಿವೃದ್ಧಿ ಯೋಜನೆ ಜಾರಿ ಮಾಡುವ ಪೂರ್ವ ದಲ್ಲಿ ಪರಿಸರ ಅಧಿಕಾರಿ, ಜೀವವೈವಿಧ್ಯ ಸಮಿತಿ, ಜಿಲ್ಲಾ ಅರಣ್ಯಾಧಿಕಾರಿಗಳ ಅಭಿಪ್ರಾಯ ಪಡೆದಿಲ್ಲ ಎಂದು ಜೀವವೈವಿಧ್ಯ ಮಂಡಳಿ ತಂಡ ತಿಳಿಸಿದೆ.

ಕುಂದುವಾಡ ಕೆರೆ ಅಭಿವೃದ್ಧಿ ಯೋಜನೆ ಅರ್ಧದಷ್ಟು ಜಾರಿ ಆಗಿದೆ. ಕುಂದವಾಡ ಕೆರೆ ಪಾರಂಪರಿಕವಾಗಿ ಹಾಗೂ ನೈಸರ್ಗಿಕವಾಗಿ ರುವ ಕೆರೆಯಾಗಿದ್ದು, ಚಾನೆಲ್‌ನಿಂದ ನೀರು ತುಂಬಿಸಿ ವಿತರಿಸುವ ಕೃತಕ ಜಲಾಶಯ ಎಂದು ಪರಿಗಣಿಸಬಾರದು. ಇಲ್ಲಿ ಅಪಾರ



ಕುಂದುವಾಡ ಕೆರೆ ಪ್ರದೇಶಕ್ಕೆ ಜೀವವೈವಿಧ್ಯ ಮಂಡಳಿ ತಂಡದ ಭೇಟಿ

ಜೌಗು ಪ್ರದೇಶವಿದೆ. ಆದ್ದರಿಂದ ಕೆರೆ ಸುತ್ತಲ ಪ್ರದೇಶದಲ್ಲಿ ವ್ಯಾಪಕ ವನೀಕರಣ ಯೋಜನೆ ಜಾರಿ ಮಾಡಬೇಕು ಹಾಗೂ ಕುಬ್ಜ ಗಿಡಗಳನ್ನು ನೆಡಬೇಕು. ಕೆರೆದಂಡೆಯ ಹೊರಗಿನ ಇಳಿಜಾರು ಪ್ರದೇಶದಲ್ಲಿ ಹುಲ್ಲು ಬೆಳೆಸಬೇಕು ಎಂದು ಸಲಹೆ ನೀಡಿತು.

ಕೆರೆ ದಂಡೆ ಪ್ರದೇಶದಲ್ಲಿ ಕಾಂಕ್ರೀಟ್ ಕಾಮಗಾರಿ ಕಡಿಮೆ ಮಾಡಬೇಕು. ಕೆರೆ ದಂಡೆ ಬಲಪಡಿಸುವ ಹೆಸರಲ್ಲಿ ಕೆರೆಯ ಪಾತ್ರವನ್ನು ಕಿರಿದಾಗಿಸಲಾಗಿದೆ ಎಂಬ ಅಂಶವನ್ನು ತಂಡ ಗಮನಿಸಿದೆ. ಕುಡಿಯುವ ನೀರಿನ ಉದ್ದೇಶ ಮುಖ್ಯವಾಗಿರುವುದರಿಂದ ಇಲ್ಲಿ ಬೋಟಿಂಗ್ ಇತ್ಯಾದಿ ಸೇರಿದಂತೆ ಪ್ರವಾಸೋದ್ಯಮಕ್ಕೆ ಉತ್ತೇಜನ ಸಲ್ಲದು. ನಿಯಮಿತ ಅವಧಿಯಲ್ಲಿ ಮಾತ್ರ ಕೆರೆ ದಂಡೆಯಲ್ಲಿ ವಾಕಿಂಗ್‌ಗೆ ಅವಕಾಶ ಕಲ್ಪಿಸಬೇಕು. ಪಕ್ಷಿಗಳು, ಜಲಚರಗಳು ಮೊದಲಿ ನಂತೆ ಜೀವಿಸಲು ಪ್ರಶಾಂತ, ನೈಸರ್ಗಿಕ ವಾತಾವರಣ ನಿರ್ಮಿಸಬೇಕು. ಈಗಾಗಲೇ ದಾವಣಗೆರೆ ಉಪ ಅರಣ್ಯ ಸಂರಕ್ಷಣಾಧಿಕಾರಿಗಳು ಜೀವವೈವಿಧ್ಯ ಕಾಯಿದೆ, ವನ್ಯಜೀವಿ ಕಾಯಿದೆ ಅಡಿ ಆಗಿರುವ ಲೋಪದೋಷಗಳನ್ನು ಪಟ್ಟಿ ಮಾಡಿದ್ದನ್ನು ತಂಡ ಎತ್ತಿ ಹೇಳಿದೆ.

ಕುಂದುವಾಡ ಕೆರೆ ಅಭಿವೃದ್ಧಿ ಯೋಜನೆ ಕಾಮಗಾರಿ ಪೂರ್ಣಗೊಳಿಸಿದ ನಂತರ ನಿರಂತರ ಕೆರೆ ಪರಿಸರ ರಕ್ಷಣೆ ಮತ್ತು ಅಭಿವೃದ್ಧಿಗೆ ವಿಶೇಷ ನಿರ್ವಹಣಾ ಸಮಿತಿ ರಚಿಸಬೇಕು ಮತ್ತು ಅದಕ್ಕಾಗಿ ಅಗತ್ಯ ಅನುದಾನ ನೀಡುವ ಬಗ್ಗೆ ಕೆರೆ ಅಭಿವೃದ್ಧಿ ಯೋಜನೆಯಲ್ಲಿ ಅವಕಾಶ ಕಲ್ಪಿಸಬೇಕು ಎಂದು ಈ ಸಂದರ್ಭದಲ್ಲಿ ಜೀವವೈವಿಧ್ಯ ಮಂಡಳಿ ತಂಡ ಶಿಫಾರಸು ಮಾಡಿದೆ.

ಈ ಕುರಿತು ಮಹಾನಗರಪಾಲಿಕೆ ಜೀವವೈವಿಧ್ಯ ಸಮಿತಿ ಸಭೆ ನಡೆಸಿ, ಸ್ಮಾರ್ಟ್‌ಸಿಟಿ ಯೋಜನೆ ಯವರು, ಉಪ ಅರಣ್ಯ ಸಂರಕ್ಷಣಾಧಿಕಾರಿ (ಟೆರಿಟೋರಿ ಯಲ್) ಜಿಲ್ಲಾ ಪರಿಸರ ಅಧಿಕಾರಿಗಳನ್ನು ಆಹ್ವಾನಿಸಬೇಕು. ಜೀವವೈವಿಧ್ಯ ಮಂಡಳಿ ಸೂಚಿಸಿರುವ ಶಿಫಾರಸ್ಸು ಹಾಗೂ ಮಹಾನಗರಪಾಲಿಕೆ ಜೀವವೈವಿಧ್ಯ ಸಮಿತಿ ಸಭೆ ನೀಡುವ ಸಲಹೆಗಳನ್ನು ಆಧರಿಸಿ, ಕೆರೆ ಅಭಿವೃದ್ಧಿ ಯೋಜನೆಯನ್ನು ಪರಿಸರ ಸ್ನೇಹಿ ಯೋಜನೆಯನ್ನಾಗಿ ಮಾರ್ಪಡಿಸಬೇಕು. ಈವರೆಗೆ ಆಗಿರುವ ಜೀವವೈವಿಧ್ಯ-ವನ್ಯಜೀವಿ ಕಾಯಿದೆ ಲೋಪಗಳನ್ನು ಸರಿಪಡಿಸಲು ಸ್ಮಾರ್ಟ್‌ಸಿಟಿ ಯೋಜನೆಯವರು ಕೆರೆ ಅಭಿವೃದ್ಧಿ ಯೋಜನೆಯಲ್ಲಿ ಅವಶ್ಯ ಬದಲಾವಣೆ ಮಾಡಬೇಕು ಎಂದು ಕರ್ನಾಟಕ ಜೀವವೈವಿಧ್ಯ ಮಂಡಳಿ ತಂಡ ತಿಳಿಸಿದೆ ಎಂದು ಮಂಡಳಿ ಅಧ್ಯಕ್ಷರ ಆಪ್ತ ಕಾರ್ಯದರ್ಶಿ ತಿಳಿಸಿದ್ದಾರೆ.

### ಪರಿಸರ ಪ್ರೇಮಿ ಡಾ. ಶಿಶುಪಾಲ ವ್ಯಾಕುಲತೆ

ಕೈಗೊಂಡಿರುವ ಅಭಿವೃದ್ಧಿ ಯೋಜನೆಯಿಂದಾಗಿ ಕುಂದುವಾಡ ಕೆರೆಯು ಪರಿಸರದ ಜೀವ ಸಂಕುಲ ಆಪತ್ತಿಗೆ ಸಿಲುಕಿರುವ ಬಗ್ಗೆ ತಾವು ಕಳೆದ ನಾಲ್ಕು ತಿಂಗಳ ಹಿಂದೆಯೇ ಸಂಬಂಧಪಟ್ಟವರಿಗೆ ಮತ್ತು ಪತ್ರಿಕಾ ಹೇಳಿಕೆ ಮೂಲಕ ತಿಳಿಸಿದ್ದರೂ ಈವರೆಗೂ ಯಾರೂ ಗಮನ ಹರಿಸದಿರುವ ಬಗ್ಗೆ ಪರಿಸರ ಪ್ರೇಮಿಯೂ ಆಗಿರುವ ದಾವಣಗೆರೆ ವಿಶ್ವವಿದ್ಯಾನಿಲಯದ ಸೂಕ್ಷ್ಮ ಜೀವಶಾಸ್ತ್ರ ವಿಭಾಗದ ಪ್ರಾಧ್ಯಾಪಕ ಡಾ. ಎಸ್. ಶಿಶುಪಾಲ ಅವರು ವ್ಯಾಕುಲತೆ ವ್ಯಕ್ತಪಡಿಸಿದ್ದಾರೆ.

ಈ ಬಗ್ಗೆ 'ಜನತಾವಾಣಿ'ಯೊಂದಿಗೆ ಮಾತನಾಡಿದ ಅವರು, ಇದೀಗ ಜೀವ ವೈವಿಧ್ಯ ಮಂಡಳಿ ಅಧ್ಯಕ್ಷ ಅನಂತ ಹೆಗಡೆ ಆಶೀಸರ ನೇತೃತ್ವದ ತಂಡ ಕುಂದುವಾಡ ಕೆರೆ ಪ್ರದೇಶಕ್ಕೆ ಭೇಟಿ ನೀಡಿ, ಪರಿಸರ ಪರಿಸ್ಥಿತಿಯನ್ನು ವೀಕ್ಷಣೆ ಮಾಡಿ, ಜೀವ ವೈವಿಧ್ಯ ಪುನಶ್ಚೇತನಕ್ಕೆ ಸೂಚನೆ ನೀಡಿದ್ದು, ಇದು 'ಊರು ಕೊಳ್ಳೆ ಹೊಡೆದ ಮೇಲೆ ಕೋಟೆ ಬಾಗಿಲು ಹಾಕಿದರು' ಎನ್ನುವ ಗಾದೆಯಂತಾಗಿದೆ ಎಂದು ಅಭಿಪ್ರಾಯಪಟ್ಟಿದ್ದಾರೆ.

## ಸೋಮೇಶ್ವರ ವಿದ್ಯಾಲಯದಲ್ಲಿ ಲಸಿಕೆ ಅಭಿಯಾನ



ದಾವಣಗೆರೆ, ಏ.22- ನಗರದ ಸೋಮೇಶ್ವರ ವಿದ್ಯಾಲಯದಲ್ಲಿ ದಾವಣಗೆರೆ ಜಿಲ್ಲಾಡಳಿತ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಮಹಾನಗರ ಪಾಲಿಕೆ ಇವರ ಸಂಯುಕ್ತಾಶ್ರಯದಲ್ಲಿ ಶ್ರೀನಿವಾಸ್ ನಗರ, ಲೆನಿನ್ ನಗರ, ಮೌನೇಶ್ವರ ಬಡಾವಣೆ, ಹೆಚ್.ಕೆ.ಆರ್ ಸರ್ಕಲ್ ಹಾಗೂ ಇತರೆ ಬಡಾವಣೆಗಳ ನಿವಾಸಿಗಳ ಕೋವಿಡ್-19 ಲಸಿಕೆಗೆ ಶಾಸಕ ಎಸ್.ಆರ್.ರವೀಂದ್ರನಾಥ್ ಚಾಲನೆ ನೀಡಿದರು.

ಈ ಸಂದರ್ಭದಲ್ಲಿ ವಿಧಾನ ಪರಿಷತ್ ಮಾಜಿ ಮುಖ್ಯ ಸಚೇತಕ ಡಾ. ಎ.ಹೆಚ್. ಶಿವಯೋಗಿಸ್ವಾಮಿ, ಪಾಲಿಕೆ ಸದಸ್ಯ ಕೆ.ಎಂ. ವೀರೇಶ್, ಸೋಮೇಶ್ವರ ವಿದ್ಯಾಲಯದ ಕಾರ್ಯದರ್ಶಿ ಕೆ.ಎಂ.ಸುರೇಶ್, ಕುರುಡಿ ಶಿವಕುಮಾರ್ ಹಾಗೂ ಮತ್ತಿತರರು ಉಪಸ್ಥಿತರಿದ್ದರು.

ಸೋಮೇಶ್ವರ ವಿದ್ಯಾಲಯದ ಅಧ್ಯಕ್ಷ ಅಶೋಕ್ ರೆಡ್ಡಿ, ಈ ಸಂದರ್ಭದಲ್ಲಿ ಲಸಿಕೆ ಪಡೆದುಕೊಂಡರು.

## 24 ನೇ ವಾರ್ಡಿನಲ್ಲಿ ಕೋವಿಡ್ ಲಸಿಕೆ ಅಭಿಯಾನ



ದಾವಣಗೆರೆ, ಏ. 22- ನಗರದ 24 ನೇ ವಾರ್ಡಿನ ಸೂಪರ್ ಮಾರ್ಕೆಟ್ ನಲ್ಲಿರುವ ಪ್ರಾಥಮಿಕ ಚಿಕಿತ್ಸಾ ಕೇಂದ್ರದಲ್ಲಿ ಲಸಿಕೆ ಅಭಿಯಾನಕ್ಕೆ ಶಾಸಕ ಎಸ್.ಎ. ರವಿಂದ್ರನಾಥ್, ಮಹಾಪೌರ ಎಸ್.ಟಿ ವೀರೇಶ್ ಚಾಲನೆ ನೀಡಿದರು.

ಪಾಲಿಕೆ ಸದಸ್ಯರಾದ ಪ್ರಸನ್ನ ಕುಮಾರ್ ನೇತೃತ್ವದಲ್ಲಿ ಮನೆ ಮನೆಗೆ ತೆರಳಿ ಕೋವಿಡ್ ಮುಂಜಾಗ್ರತ ಕ್ರಮಗಳ ಕುರಿತು ಸಾರ್ವಜನಿಕರಲ್ಲಿ ಅರಿವು ಮೂಡಿಸುತ್ತಾ ವಾರ್ಡ್ ಮಟ್ಟದ ಲಸಿಕೆ ಅಭಿಯಾನದಲ್ಲಿ ಹಿರಿಯ ನಾಗರಿಕರು ಬಂದು ಲಸಿಕೆ ಹಾಕಿಸಿ ಕೊಳ್ಳಬೇಕೆಂದು ಮನವಿ ಮಾಡಿದರು. ಈ ಸಂದರ್ಭದಲ್ಲಿ ಮಾಜಿ ಮುಖ್ಯ ಸಚೇತಕ ಡಾ|| ಶಿವಯೋಗಿ ಸ್ವಾಮಿ, ಮಾಜಿ ಮೇಯರ್ ಸುಧಾ ಜಯರುದ್ರೇಶ್, ಬಿಜೆಪಿ ಮುಖಂಡ ಕಲ್ಲೇಶ್, ವಾರ್ಡ್ ಪ್ರಮುಖರಾದ ಪದ್ಮನಾಭ ಶೆಟ್ರು, ಜೆ. ಕಿರಣ್ ಕುಮಾರ್, ಶೇಖರ್ ಉಪ್ಪಿನ್ ಉಪಸ್ಥಿತರಿದ್ದರು. ಪ್ರೊ. ನರಸಿಂಹಯ್ಯ ಈ ಸಂದರ್ಭದಲ್ಲಿ ಲಸಿಕೆ ಪಡೆದುಕೊಂಡರು.

## ಸೋಮೇಶ್ವರದಲ್ಲಿ ಲಸಿಕೆ ಪಡೆದ ವೀಣಾ ನಂಜಣ್ಣ



ದಾವಣಗೆರೆ, ಏ.22- ನಗರದ ಸೋಮೇಶ್ವರ ವಿದ್ಯಾಲಯದಲ್ಲಿ ಶಾಸಕ ಎಸ್.ಎ. ರವೀಂದ್ರನಾಥ್ ಅವರ ಪುತ್ರಿ, ಮಹಾನಗರ ಪಾಲಿಕೆ 40ನೇ ವಾರ್ಡಿನ ಸದಸ್ಯರಾದ ವೀಣಾ ನಂಜಣ್ಣ ಹಾಗೂ ಅವರ ಸಹೋದರಿ ಅಕ್ಕಮಹಾದೇವಿ ನಟರಾಜ್ ಇವರು ಕೋವಿಡ್ -19 ಲಸಿಕೆಯನ್ನು ಪಡೆದುಕೊಂಡರು. ಈ ಸಂದರ್ಭದಲ್ಲಿ ಪಾಲಿಕೆ ಸದಸ್ಯ ಕೆ.ಎಂ.ವೀರೇಶ್ ಹಾಗೂ ಮತ್ತಿತರರು ಉಸ್ಥಿತರಿದ್ದರು.

## ಜಿಲ್ಲೆಯಲ್ಲಿ ಸಾವಿರ ದಾಟಿದ ಸಕ್ರಿಯ ಸೋಂಕಿತರ ಸಂಖ್ಯೆ

ದಾವಣಗೆರೆ, ಏ.22- ಜಿಲ್ಲೆಯಲ್ಲಿ ಗುರುವಾರ 157 ಜನರಲ್ಲಿ ಕೊರೊನಾ ಸೋಂಕು ಪತ್ತೆಯಾದ ಬಗ್ಗೆ ವರದಿಯಾಗಿದೆ. ಸೋಂಕಿತರ ಸಂಖ್ಯೆ 1126ಕ್ಕೆ ಏರಿಕೆಯಾಗಿದೆ. ದಾವಣಗೆರೆ ತಾಲ್ಲೂಕಿನಲ್ಲಿ 114, ಹರಿಹರ 16, ಜಗಳೂರು 7, ಚನ್ನಗಿರಿ 4, ಹೊನ್ನಾಳಿ 10 ಹಾಗೂ ಹೊರ ಜಿಲ್ಲೆಯ 6 ಜನರಲ್ಲಿ ಸೋಂಕು ಪತ್ತೆಯಾಗಿದೆ.

## ಕೊರೊನಾ ಗಂಭೀರವಾಗಿ ಪರಿಗಣಿಸದ ಜಿಲ್ಲಾಡಳಿತ: ಸುಭಾಷ್ಚಂದ್ರ ಆರೋಪ



ದಾವಣಗೆರೆ, ಏ.22 - ರಾಜ್ಯ ಸರ್ಕಾರ ಹಾಗೂ ಜಿಲ್ಲಾಡಳಿತ ಕೊರೊನಾವನ್ನು ಗಂಭೀರವಾಗಿ ಪರಿಗಣಿಸುತ್ತಿಲ್ಲ ಎಂದು ಜಿಲ್ಲಾ ಕಾಂಗ್ರೆಸ್ ಪ್ರಚಾರ ಸಮಿತಿ ಮಾಜಿ ಅಧ್ಯಕ್ಷ ಎಂ.ಟಿ. ಸುಭಾಷ್ಚಂದ್ರ ಆರೋಪಿಸಿದ್ದಾರೆ.

ಪತ್ರಿಕಾಗೋಷ್ಠಿಯಲ್ಲಿಂದು ಮಾತನಾಡಿದ ಅವರು, ಜಿಲ್ಲಾಧಿಕಾರಿ ಹಾಗೂ ಎಸ್ಪಿ ಅವರು ಕೊರೊನಾ ಬಗ್ಗೆ ನಡೆದುಕೊಳ್ಳುತ್ತಿರುವ ರೀತಿ ವಿಚಿತ್ರವಾಗಿ ಕಾಣುತ್ತಿದೆ ಎಂದರು.

ಆಕ್ಸಿಜನ್, ಬೆಡ್, ಲಸಿಕೆ ಮುಂತಾದ ವಿಷಯಗಳ ಬಗ್ಗೆ ಆದ್ಯತೆ ನೀಡದೆ, ಬರೀ ಮಾಸ್ಕ್ ಹಾಕಿಕೊಳ್ಳದವರಿಗೆ ದಂಡ ಹಾಕುತ್ತಾ ಮಾಧ್ಯಮಗಳಲ್ಲಿ ಪ್ರಚಾರ ಗಿಟ್ಟಿಸಿಕೊಳ್ಳುತ್ತಿದ್ದಾರೆ ಟೀಕಿಸಿದರು.

ಇನ್ನು ಹತ್ತು ದಿನಗಳ ಒಳಗೆ ಮಾಸ್ಕ್ ಹಾಕಿ ದಂಡ ವಸೂಲಿ ಮಾಡುವ ನಾಟಕ ನಿಲ್ಲಿಸದಿದ್ದರೆ ಜಿಲ್ಲಾ ಕಾಂಗ್ರೆಸ್ ವಕೀಲರ, ಕಾರ್ಮಿಕರ ಹಾಗೂ ಸಾಂಸ್ಕೃತಿಕ ಘಟಕಗಳಿಂದ ಜಿಲ್ಲಾಧಿಕಾರಿಗಳಿಗೆ ಘೇರಾವ್ ಹಾಕಲಾಗುವುದು ಎಂದು ಹೇಳಿದರು.

ಪತ್ರಿಕಾಗೋಷ್ಠಿಯಲ್ಲಿ ಬಿ.ಜಿ. ಚಂದ್ರಶೇಖರ್, ಕಡತಿ ತಿಪ್ಪೇಶ್, ಯಲವಟ್ಟಿ ಕೃಷ್ಣನಾಯ್ಕ, ಸಂತೋಷ್ ನಾಯ್ಕ, ಸಣ್ಣರಾಜು, ಟಿ.ನಾಗರಾಜ್ ಉಪಸ್ಥಿತರಿದ್ದರು.

## ರಂಭಾಪುರಿ ಪೀಠಕ್ಕೆ ಯಾತ್ರಾರ್ಥಿಗಳ ನಿಷೇಧ



ರಂಭಾಪುರಿ ಪೀಠ (ಬಾಳೆಹೊನ್ನೂರು), ಏ.22- ಕೊರೊನಾ ಸೋಂಕಿನ 2ನೇ ಅಲೆ ರಾಜ್ಯದಲ್ಲಿ ಪ್ರಬಲವಾಗಿ ಹರಡುತ್ತಿರುವ ಹಿನ್ನೆಲೆಯಲ್ಲಿ ಸರ್ಕಾರದ ನಿರ್ದೇಶನದನ್ವಯ ಶ್ರೀ ಜಗದ್ಗುರು ರಂಭಾಪುರಿ ಪೀಠಕ್ಕೆ ಆಗಮಿಸುವ ಯಾತ್ರಾರ್ಥಿಗಳಿಗೆ ನಿಷೇಧ ಹೇರಲಾಗಿದೆ.

ಶ್ರೀ ಪೀಠದಲ್ಲಿ ಸಾಂಪ್ರದಾಯಿಕ ಪೂಜೆಗಳು ಮಾತ್ರ ನಡೆಯುತ್ತಿದ್ದು, ದೈವ ದರ್ಶನ, ಪ್ರಸಾದದ ವ್ಯವಸ್ಥೆ ಮತ್ತು ವಾಸ್ತವ್ಯದ ಕೊಠಡಿಗಳ ವ್ಯವಸ್ಥೆಯನ್ನು ಮುಂದಿನ ಪ್ರಕಟಣೆವರೆಗೆ ನಿಷೇಧಿಸಲಾಗಿದೆ ಎಂದು ಪ್ರಕಟಣೆ ತಿಳಿಸಿದೆ.

## ಸಂತೆಬೆನ್ನೂರು ಪುಷ್ಕರಣಿ ಪ್ರವೇಶ ನಿಷೇಧ

ಸಂತೆಬೆನ್ನೂರು, ಏ.22- ಕೊರೊನಾ 2ನೇ ಅಲೆ ಹೆಚ್ಚುತ್ತಿರುವ ಹಿನ್ನೆಲೆಯಲ್ಲಿ ಇಲ್ಲಿನ ಐತಿಹಾಸಿಕ ಪುಷ್ಕರಣಿಯನ್ನು ಸಂಪೂರ್ಣ ಬಂದ್ ಮಾಡಲಾಗಿದ್ದು, ಸಾರ್ವಜನಿಕರ ಪ್ರವೇಶವನ್ನು ನಿಷೇಧಿಸಲಾಗಿದೆ.

ಸರ್ಕಾರದ ಮುಂದಿನ ಆದೇಶ ಬರುವವರೆಗೂ ಪುಷ್ಕರಣಿ ವೀಕ್ಷಣೆಗೆ ಅವಕಾಶ ಇರುವುದಿಲ್ಲ ಎಂದು ನಿರ್ವಾಹಕ ಮಂಡಳಿ ತಿಳಿಸಿದೆ.

### ರಂಜಾನ್ ರೋಜಾ ಸಮಯ

| ದಿನಾಂಕ : 23.04.2021 | ದಿನಾಂಕ : 24.04.2021 |
|---|---|
| ಇಫ್ತೇಯಾರಿ ಸಮಯ : 6-47 | ಸಹೇರಿ ಸಮಯ : 4-53 |

## ರಿದ್ಧಿ ಸಿದ್ಧಿ ಫೌಂಡೇಶನ್ ವತಿಯಿಂದ ಮಾಸ್ಕ್ ವಿತರಣೆ



ದಾವಣಗೆರೆ, ಏ.22- ನಗರದಲ್ಲಿ ರಿದ್ಧಿ ಸಿದ್ಧಿ ಫೌಂಡೇಶನ್ ವತಿಯಿಂದ ಕೊರೊನಾ ಜಾಗೃತಿ, ಸಾಮಾಜಿಕ ಅಂತರ, ಮಾಸ್ಕ್ ವಿತರಣೆ ಕಾರ್ಯಕ್ರಮಕ್ಕೆ ಮಹಾನಗರ ಪಾಲಿಕೆ ಮಾಜಿ ಸದಸ್ಯ ದಿನೇಶ್ ಕೆ. ಶೆಟ್ಟಿ ಚಾಲನೆ ನೀಡಿದರು. ಈ ಸಂದರ್ಭದಲ್ಲಿ ಮಹಾನಗರ ಪಾಲಿಕೆ ವಿಪಕ್ಷ ನಾಯಕ ಎ. ನಾಗರಾಜ್, ರಿದ್ಧಿ ಸಿದ್ಧಿ ಫೌಂಡೇಶನ್ನಿನ ಅಧ್ಯಕ್ಷ ರಾಜು ಭಂಡಾರಿ, ಶ್ರೀಕಾಂತ ಬಗರೆ, ಇನಾಯತ್ ಇನ್ನಿತರರೂ ಉಪಸ್ಥಿತರಿದ್ದರು.

## ಶನಿವಾರ ಮತ್ತು ಭಾನುವಾರ ನಗರದ ಎಪಿಎಂಸಿಗೆ ರಜೆ

ದಾವಣಗೆರೆ, ಏ. 22- ಕೊರೊನಾ 19 ಸಾಂಕ್ರಾಮಿಕ ರೋಗ ಹೆಚ್ಚಾಗಿ ಹರಡುತ್ತಿರುವ ಹಿನ್ನೆಲೆಯಲ್ಲಿ ರಾಜ್ಯ ಸರ್ಕಾರದ ಮಾರ್ಗಸೂಚಿ ಅನ್ವಯ ಏ.22 ರಂದು ಕರ್ಫ್ಯೂ ಜಾರಿಯಲ್ಲಿರುವುದರಿಂದ ಹಾಗೂ ಕೃಷಿ ಮಾರಾಟ ಇಲಾಖೆಯ ನಿರ್ದೇಶಕರ ಆದೇಶದಂತೆ ನಾಡಿದ್ದು ದಿನಾಂಕ 24 ರ ಶನಿವಾರ ಮತ್ತು 25 ರ ಭಾನುವಾರ ದಾವಣಗೆರೆ ಕೃಷಿ ಉತ್ಪನ್ನ ಮಾರುಕಟ್ಟೆಯಲ್ಲಿ ವ್ಯಾಪಾರ ವಹಿವಾಟುಗಳನ್ನು ಸ್ಥಗಿತಗೊಳಿಸಿ ಮಾರುಕಟ್ಟೆಗೆ ರಜಾ ದಿನವೆಂದು ಘೋಷಿಸಲಾಗಿದೆ ಎಂದು ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಯ ಕಾರ್ಯದರ್ಶಿಗಳು ತಿಳಿಸಿದ್ದಾರೆ.

## ಎರಡನೇ ಅಲೆ ಹತ್ತಿಕ್ಕಲು ಕಠಿಣ ಕ್ರಮ

**ಫೀವರ್ ಕ್ಲಿನಿಕ್, ಸಹಾಯವಾಣಿಗೆ ಮತ್ತಷ್ಟು ಬಲ**

ಬೆಂಗಳೂರು, ಏ. 22 - ಬೆಂಗಳೂರು ಸೇರಿದಂತೆ ರಾಜ್ಯದ ಕೊರೊನಾ ಎರಡನೇ ಅಲೆಯನ್ನು ಹತ್ತಿಕ್ಕುವ ಸಂಬಂಧ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಮತ್ತಷ್ಟು ಕಠಿಣ ಕ್ರಮಗಳನ್ನು ತೆಗೆದುಕೊಂಡಿದ್ದಾರೆ.

ಕೊರೊನಾ ಸೋಂಕು ಚಿಕಿತ್ಸೆಗೆ ಒಳಪಟ್ಟು ಮನೆಗೆ ಹಿಂತಿರುಗಿದ ನಂತರ ಬೆಂಗಳೂರು ನಗರ ಸಚಿವರು, ಶಾಸಕರು ಹಾಗೂ ಜಿಲ್ಲಾ ಉಸ್ತುವಾರಿ ಸಚಿವರ ಜೊತೆ ವಿಡಿಯೋ ಸಂವಾದ ನಡೆಸಿದ ಸಂದರ್ಭದಲ್ಲಿ ಅಧಿಕಾರಿಗಳಿಗೆ ಕೆಲವು ಆದೇಶಗಳನ್ನು ನೀಡಿದ್ದಾರೆ.

ನಗರದಲ್ಲಿ ಫೀವರ್ ಕ್ಲಿನಿಕ್‌ಗಳನ್ನು ಬಲಪಡಿಸಿ, ಜ್ವರ ಮತ್ತಿತರೆ ಲಕ್ಷಣ ಹೊಂದಿರುವವರ ಪರೀಕ್ಷೆ ಹಾಗೂ ಸೂಕ್ತ ಮಾರ್ಗದರ್ಶನ ನೀಡಲು ತೀರ್ಮಾನಿಸಲಾಯಿತು. ಇದರಿಂದ ಅಗತ್ಯವಿರುವವರಿಗೆ ಮಾತ್ರ ಆಸ್ಪತ್ರೆಗೆ ದಾಖಲಿಸಲು ಸಾಧ್ಯವಾಗುತ್ತದೆ. ಸಹಾಯವಾಣಿಗಳನ್ನು ಇನ್ನಷ್ಟು ಬಲಪಡಿಸಿ, ಸಾರ್ವಜನಿಕರ ಸಮಸ್ಯೆಗಳಿಗೆ ತ್ವರಿತವಾಗಿ ಸ್ಪಂದಿಸುವಂತೆ ಸೂಚಿಸಿದರು.

ಹೋಮ್ ಐಸೋಲೇಷನ್ ನಲ್ಲಿ ಇರುವವರ ಚಿಕಿತ್ಸೆ, ಟೆಲಿ ಕನ್ಸಲ್ಟೇಷನ್ ಒದಗಿಸಲು ಹಾಗೂ ಅವರ ಮೇಲೆ ನಿಗಾ ವಹಿಸಲು ಆದ್ಯತೆ ನೀಡುವಂತೆ ಸೂಚಿಸಿದರು. ಖಾಸಗಿ ಆಸ್ಪತ್ರೆಗಳು ಕೋವಿಡ್ ಚಿಕಿತ್ಸೆಗೆ ಬೆಡ್ ಗಳನ್ನು ಒದಗಿಸುವುದನ್ನು ಖಾತರಿ ಪಡಿಸಬೇಕು. ಆಯಾ ವಲಯಗಳ ಡಿಸಿಪಿಗಳು ಆಸ್ಪತ್ರೆಗಳಿಗೆ ಭೇಟಿ ನೀಡಿ ಪರಿಶೀಲಿಸುವಂತೆ ಸೂಚಿಸಲಾಯಿತು.

ನೋಡಲ್ ಅಧಿಕಾರಿಗಳು ಆಯಾ ವಲಯದ ಕೋವಿಡ್ ನಿರ್ವಹಣೆಯ ಸಂಪೂರ್ಣ ಜವಾಬ್ದಾರರು. ಅವರು ಎಲ್ಲ ಸಮಸ್ಯೆಗಳ ಕುರಿತೂ ಸ್ಪಂದಿಸಬೇಕು.

ಆರೋಗ್ಯ ಸೇವೆಯಲ್ಲಿ ನಿರತರಾಗಿರುವ ವೈದ್ಯಕೀಯ, ಅರೆ ವೈದ್ಯಕೀಯ ಸಿಬ್ಬಂದಿಗೆ ಸ್ಥೈರ್ಯ ತುಂಬುವಂತೆ ಸೂಚಿಸಿದರು.

ಚಿತಾಗಾರಗಳಿಗೆ ಶವ ಸಾಗಿಸುವ ಆಂಬ್ಯುಲೆನ್ಸ್‌ಗಳು ತಾಸುಗಟ್ಟಲೆ ಸರದಿಯಲ್ಲಿ ನಿಲ್ಲುವುದರಿಂದ ಶವಗಳನ್ನು ಸಾಗಿಸಲು ಆಂಬ್ಯುಲೆನ್ಸ್‌ಗಳ ಕೊರತೆ ಆಗಿರುವ ಹಿನ್ನೆಲೆಯಲ್ಲಿ ಶವಗಳನ್ನು ಇರಿಸಲು ಚಿತಾಗಾರಗಳಲ್ಲಿ ತಾತ್ಕಾಲಿಕ ವ್ಯವಸ್ಥೆ ಮಾಡಲು ಸೂಚಿಸಲಾಯಿತು. ಕೋವಿಡ್ ನಿರ್ವಹಣೆಯಲ್ಲಿ ಸಾಧ್ಯವಿರುವಲ್ಲಿ ಸ್ವಯಂ ಸೇವಕರ ನೆರವು ಪಡೆಯಲು ಸಭೆಯಲ್ಲಿ ನಿರ್ಧರಿಸಲಾಯಿತು.

### ಡ್ರೋನ್ ಮೂಲಕ ಲಸಿಕೆ


ನವದೆಹಲಿ, ಏ. 22 - ಕೊರೊನಾ ಲಸಿಕೆಯನ್ನು ಡ್ರೋನ್ ಮೂಲಕ ಸಾಗಿಸುವ ಸಾಧ್ಯತೆಯ ಅಧ್ಯಯನ ನಡೆಸಲು ಇಂಡಿಯನ್ ಕೌನ್ಸಿಲ್ ಆಫ್ ಮೆಡಿಕಲ್ ರೀಸರ್ಚ್ (ಐ.ಸಿ.ಎಂ.ಆರ್.)ಗೆ ವಿಮಾನ ಯಾನ ಸಚಿವಾಲಯ ಅನುಮತಿ ನೀಡಿದೆ. ಕಾನ್ಪುರದ ಐ.ಐ.ಟಿ. ಜೊತೆಗೂಡಿ ಐ.ಸಿ.ಎಂ.ಆರ್. ಅಧ್ಯಯನ ನಡೆಸಲಿದೆ.

## ಕೊರೊನಾ ನಿಯಮ ಉಲ್ಲಂಘಿಸಿದ ಆಟೋ ಚಾಲಕನ ವಶ

ದಾವಣಗೆರೆ, ಏ.22- ಕೊರೊನಾ ನಿಯಮ ಉಲ್ಲಂಘಿಸಿ, ಹೆಚ್ಚುವರಿ ಪ್ರಯಾಣಿಕರನ್ನು ಹೊತ್ತು ಸಾಗುತ್ತಿದ್ದ ಪ್ರಯಾಣಿಕರ ಆಟೋ ಮೇಲೆ ಚನ್ನಗಿರಿ ಪೊಲೀಸ್ ಠಾಣೆ ಪಿಎಸ್ಐ ಜಿ. ಜಗದೀಶ್ ಮತ್ತು ಸಿಬ್ಬಂದಿಗಳ ತಂಡ ಇಂದು ದಾಳಿ ನಡೆಸಿ ಆಟೋ ಚಾಲಕನನ್ನು ವಶಕ್ಕೆ ಪಡೆದು ಈತನ ವಿರುದ್ಧ ಪ್ರಕರಣ ದಾಖಲಿಸಿದ್ದಾರೆ.

ಚನ್ನಗಿರಿ ತಾಲ್ಲೂಕಿನ ತಿಪ್ಪಗೊಂಡನಹಳ್ಳಿ ಗ್ರಾಮದ ಆರ್. ಪ್ರಭು ಎಂಬ ಆಟೋ ಚಾಲಕನು ಚನ್ನಗಿರಿ ಟೌನ್ ಕಗತೂರು ರಸ್ತೆಯಲ್ಲಿ ಆಟೋದಲ್ಲಿ 8-9 ಜನ ಪ್ರಯಾಣಿಕರನ್ನು ಹತ್ತಿಸಿಕೊಂಡು ಹೋಗುತ್ತಿದ್ದ. ಈ ವೇಳೆ ದಾಳಿ ನಡೆಸಿದಾಗ, ಆಟೋದಲ್ಲಿದ್ದ ಪ್ರಯಾಣಿಕರು ಆಟೋದಿಂದ ಇಳಿದು ಓಡಿ ಹೋಗಿದ್ದಾರೆ. ಹೆಚ್ಚಿನ ಜನರನ್ನು ತನ್ನ ಆಟೋದಲ್ಲಿ ಕೂರಿಸಿಕೊಂಡು ಚಾಲನೆ ಮಾಡಿದ ಚಾಲಕನನ್ನು ವಶಕ್ಕೆ ಪಡೆಯಲಾಗಿದೆ.

## ಹರಿಹರ ಎಪಿಎಂಸಿ ಅಧ್ಯಕ್ಷರಾಗಿ ಮಂಜುನಾಥ್ ಪಟೇಲ್ 3ನೇ ಬಾರಿಗೆ ಆಯ್ಕೆ



ಹರಿಹರ, ಏ.22- ಹರಿಹರ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಯ ಅಧ್ಯಕ್ಷರಾಗಿ ಕೊಮಾರನಹಳ್ಳಿಯ ಜಿ. ಮಂಜುನಾಥ್ ಪಟೇಲ್ ಇಂದು ನಡೆದ ಚುನಾವಣೆಯಲ್ಲಿ ಆಯ್ಕೆಯಾಗಿದ್ದಾರೆ.

ಹರಿಹರ ಎಪಿಎಂಸಿಗೆ ಮೂರನೇ ಬಾರಿಗೆ ಅಧ್ಯಕ್ಷರಾಗಿರುವ ಮಂಜುನಾಥ್ ಪಟೇಲ್ ಅವರು ಕಳೆದ 15 ವರ್ಷಗಳಿಂದ ಸತತವಾಗಿ ಎಪಿಎಂಸಿ ಸದಸ್ಯರಾಗಿದ್ದು, ಈ ಹಿಂದಿನ ಅವಧಿಯಲ್ಲಿ ಎರಡು ಬಾರಿ ಅಧ್ಯಕ್ಷರಾಗಿದ್ದನ್ನು ಇಲ್ಲಿ ಸ್ಮರಿಸಬಹುದು.

ಹನುಮಂತ ರೆಡ್ಡಿ ಅವರ ರಾಜೀನಾಮೆಯಿಂದಾಗಿ ತೆರವಾಗಿದ್ದ ಅಧ್ಯಕ್ಷ ಸ್ಥಾನಕ್ಕೆ ನಡೆದ ಚುನಾವಣೆಯಲ್ಲಿ ಕಾಂಗ್ರೆಸ್ - ಬಿಜೆಪಿ ಬೆಂಬಲಿತ ಅಭ್ಯರ್ಥಿಯಾಗಿ ಮಂಜುನಾಥ್ ಪಟೇಲ್ ಮತ್ತು ಜೆಡಿಎಸ್ ಬೆಂಬಲಿತ ಅಭ್ಯರ್ಥಿಯಾಗಿ ಭಾನುವಳ್ಳಿಯ ಆರ್. ಹೆಚ್. ಮಲ್ಲಿಕಾರ್ಜುನ್ ಸ್ಪರ್ಧಿಸಿದ್ದರು.

ಮಂಜುನಾಥ್ ಪಟೇಲ್ ಅವರು 10 ಮತಗಳನ್ನು ಪಡೆದು ಆಯ್ಕೆಯಾದರೆ, ಪ್ರತಿಸ್ಪರ್ಧಿ ಮಲ್ಲಿಕಾರ್ಜುನ್ 6 ಮತಗಳನ್ನು ಪಡೆದು ಪರಾಭವಗೊಂಡರು.

ಒಟ್ಟು 16 ಸದಸ್ಯರ ಪೈಕಿ ನಾಮಿನಿ ಸದಸ್ಯರು ಸೇರಿ ಬಿಜೆಪಿ 6, ಕಾಂಗ್ರೆಸ್ 4 ಮತ್ತು ಜೆಡಿಎಸ್ 6 ಸದಸ್ಯರನ್ನು ಹೊಂದಿದೆ. ಇಲ್ಲಿ ಕಳೆದ ನಾಲ್ಕು ವರ್ಷಗಳಿಂದಲೂ ಬಿಜೆಪಿ - ಕಾಂಗ್ರೆಸ್ ಹೊಂದಾಣಿಕೆ ಮಾಡಿಕೊಂಡು ಆಡಳಿತ ನಡೆಸುತ್ತಿವೆ.

ಎಪಿಎಂಸಿ ಉಪಾಧ್ಯಕ್ಷ ಕೊಕ್ಕನೂರು ಬಸವರಾಜ್, ನಿರ್ದೇಶಕರಾದ ಅಮರಾವತಿ ಮಹಾದೇವಪ್ಪ ಗೌಡ್ರು, ಬೆಳ್ಳೂಡಿ ನರೇಂದ್ರ, ಮಲ್ಲನಾಯ್ಕನಹಳ್ಳಿಯ ಗೌಡ್ರ ಶೇಖರಪ್ಪ, ಹನುಮಂತ ರೆಡ್ಡಿ, ಶ್ರೀಮತಿ ಶಾಂತಮ್ಮ ಸುರೇಶ್, ಹೆಚ್.ಕೆ. ಶಿವಣ್ಣ, ಕೆ.ಎನ್. ಹಳ್ಳಿಯ ವಿ.ಕುಬೇರಪ್ಪ, ಜಿಗಳಿಯ ಈರಮ್ಮ ರುದ್ರಗೌಡ, ವಾಸನದ ತಂಬಳಿ ರುದ್ರಪ್ಪ ಸೇರಿದಂತೆ ಎಲ್ಲಾ ನಿರ್ದೇಶಕರು ಚುನಾವಣೆಯಲ್ಲಿ ಭಾಗವಹಿಸಿ ಮತ ಹಾಕಿದರು.

ತಹಶೀಲ್ದಾರ್ ಕೆ.ಬಿ. ರಾಮಚಂದ್ರಪ್ಪ ಅವರು ಚುನಾವಣಾಧಿಕಾರಿಯಾಗಿದ್ದರು. ಎಪಿಎಂಸಿ ಕಾರ್ಯದರ್ಶಿ ಶ್ರೀಮತಿ ವಿದ್ಯಾಶ್ರೀ ಸಹಕರಿಸಿದರು.

ಚುನಾವಣೆ ನಂತರ ನೂತನ ಅಧ್ಯಕ್ಷರನ್ನು ಶಾಸಕ ಎಸ್. ರಾಮಪ್ಪ, ಮಾಜಿ ಶಾಸಕ ಬಿ.ಪಿ. ಹರೀಶ್, ಬಿಜೆಪಿ ಜಿಲ್ಲಾಧ್ಯಕ್ಷ ಹನಗವಾಡಿ ವೀರೇಶ್, ಜಿ.ಪಂ. ಸದಸ್ಯ ಬಿ.ಎಂ. ವಾಗೀಶಸ್ವಾಮಿ ಸೇರಿದಂತೆ ಇನ್ನೂ ಅನೇಕರು ಅಭಿನಂದಿಸಿದರು.






JANATHAVANI - Published, Owned and Printed by Vikas Shadaksharappa Mellekatte, at Jayadhara Offset Printers, # 605, 'Jayadhara' Hadadi Road, Davangere - 5, Published from # 605, 'Jayadhara' Hadadi Road, Davangere - 5. Editor Vikas Shadaksharappa Mellekatte